# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ

| ಸಂಘದ ಸದಸ್ಯತ್ವ ಶುಲ್ಕ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

ಸಂಪುಟ : 14 ಸಂಚಿಕೆ : 3 ಖಾಸಗಿ ಪ್ರಸಾರಕ್ಕಾಗಿ ಸೆಪ್ಟೆಂಬರ್–ಡಿಸೆಂಬರ್ 2023

E-mail : queries@mmdbs.in magazines@mmdbs.in web : www.mmdbs.in


## ಪ್ರವಾಸ ವಿಶೇಷಾಂಕ



ಗಡಿದಂನ ಶ್ರೀ ವೆಂಕಟರಮಣ ಸ್ವಾಮಿ ಸನ್ನಿಧಿ



ರಂಗಸ್ಥಳದ ಶ್ರೀ ರಂಗನಾಥ ಸ್ವಾಮಿಯ ಸನ್ನಿಧಿ

## ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರ,

ಮುಂಬರುವ 2024 ಕ್ಯಾಲೆಂಡರ್ ವರ್ಷದ ಶುಭಾಶಯಗಳು. ಮಕರ ಸಂಕ್ರಾಂತಿ ಹಬ್ಬ ಮತ್ತು ಶಿವರಾತ್ರಿಯು ಸಮುದಾಯ ದವರಿಗೆಲ್ಲಾ ಶುಭ ತರಲೆಂದು ಹಾರೈಸುತ್ತೇನೆ.

ತಾರೀಖು 10.12.2023ರಂದು ಬೃಹಚ್ಚರಣ ಸಂಘವು ಗಡಿದಂ ಮತ್ತು ರಂಗಸ್ಥಳಗಳಿಗೆ ಹಮ್ಮಿಕೊಂಡಿದ್ದ ವಾರ್ಷಿಕ ಒಂದು ದಿನದ ಪ್ರವಾಸವು ಯಶಸ್ವಿಯಾಗಿ ಪೂರ್ಣಗೊಂಡಿತು. ನೂರ ಎಂಬತ್ತೆರಡು (182) ಸದಸ್ಯರು ಇದಕ್ಕೆ ಹೆಸರನ್ನು ನೊಂದಾಯಿಸಿದ್ದು 4 ಬಸ್ಸುಗಳಲ್ಲಿ ಪ್ರವಾಸ ಏರ್ಪಾಡಾಗಿತ್ತು. ಸದಸ್ಯರ ಕುಟುಂಬದವರು, ಬಂಧು ಬಾಂಧವರು ಸ್ನೇಹಿತರೊಂದಿಗೆ ಸಮಯಕ್ಕೆ ಸರಿಯಾಗಿ ಬಂದು ಪ್ರವಾಸದ ದಿನ ಪೂರ್ಣ ಸಹಕಾರ ಕೊಟ್ಟಿದ್ದು ಸಂಘದ ಮೇಲೆ ಅವರಿಗಿದ್ದ ಅಭಿಮಾನ, ವಿಶ್ವಾಸ ಇಮ್ಮಡಿಯಾಗಿರುವುದಕ್ಕೆ ಸಾಕ್ಷಿಯಾಗಿತ್ತು.

ಎರಡೂ ದೇವಸ್ಥಾನಗಳಲ್ಲಿ ಪ್ರಾಕಾರೋತ್ಸವವನ್ನು ಆಯೋಜಿಸಿದ್ದು ಸದಸ್ಯರು ಅದರಲ್ಲಿ ಪಾಲ್ಗೊಂಡು ಧನ್ಯರಾದರು. ಸಮಿತಿಯ ಸದಸ್ಯರು ಪ್ರವಾಸಕ್ಕೆ ಮುನ್ನ ಈ ಸ್ಥಳಗಳಿಗೆ ಎರಡು ಬಾರಿ ಭೇಟಿ ನೀಡಿ ಅಲ್ಲಿ ಎಲ್ಲಾ ಏರ್ಪಾಡುಗಳನ್ನು ಮಾಡಿದ್ದರು. ಇದೇ ಸಂದರ್ಭದಲ್ಲಿ 2024ರ ಸಂಘದ ಕ್ಯಾಲೆಂಡರನ್ನು ಸಂಘದ ಹಿರಿಯ ಸದಸ್ಯರು ಮತ್ತು ಮಹಿಳೆಯರ ಮೂಲಕ ಬಿಡುಗಡೆ ಮಾಡಿ ವಿತರಿಸಲಾಯಿತು.

ಕಾರ್ಯಕ್ರಮಗಳು ಅಂದುಕೊಂಡಂತಯೇ ನಡೆದು ಸದಸ್ಯರು ರಾತ್ರಿ 9.30ಕ್ಕೆ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು. ಆ ದಿನದ ಸವಿ ನೆನಪುಗಳನ್ನು ಸದಸ್ಯರು ಪರಸ್ಪರ ಹಂಚಿಕೊಂಡಿದ್ದು ಎಲ್ಲರಿಗೂ ಸಂತಸವನ್ನುಂಟುಮಾಡಿತು. ಸಮಿತಿಯ ಸದಸ್ಯರಿಗೆ, ಪ್ರವಾಸದಲ್ಲಿ ಪಾಲ್ಗೊಂಡ ಎಲ್ಲರಿಗೂ ಮತ್ತು ಮುಖ್ಯವಾಗಿ ಪ್ರಾಯೋಜಕರಿಗೆ ಧನ್ಯವಾದಗಳು. ಪ್ರವಾಸದ ವಿವರಗಳು ಒಳಗಿನ ಪುಟಗಳಲ್ಲಿ ಲಭ್ಯವಿವೆ.

ತಾರೀಖು 14.3.2024, ಗುರುವಾರದಂದು ಕಿತ್ತಿಗಾನ ಹಳ್ಳಿಯಲ್ಲಿ ನಡೆಯಲಿರುವ ನಾಗಾರಾಧನೆ ಕಾರ್ಯಕ್ರಮಕ್ಕೆ ಸಮುದಾಯದವರು ಹೀಗೆಯೇ ತಮ್ಮ ಕುಟುಂಬದವರೊಂದಿಗೆ ಆಗಮಿಸಿ ತನು, ಮನ, ಧನ ಸಹಾಯ ನೀಡುವರೆಂದು ಆಶಿಸುತ್ತೇನೆ.

ಸಂಘವು ದಿನಾಂಕ 1.4.2023ರಿಂದ ಹಮ್ಮಿಕೊಂಡಿರುವ 'ಸಾಂತ್ವನ ನಿಧಿ' ಯ ವಿಚಾರ ಈಗಾಗಲೇ ನಿಮಗೆಲ್ಲಾ ತಿಳಿದಿದೆ. ಇದಕ್ಕಾಗಿ ನಮ್ಮನ್ನಗಲಿದ 21 ಕುಟುಂಬದವರಿಗೆ ಸಂಘದ ಪರವಾಗಿ ಸಾಂತ್ವನ ಹೇಳಿ ಪ್ರತಿ ಕುಟುಂಬಕ್ಕೆ 5000/– ರೂ. ಗಳನ್ನು ನೀಡಿರುತ್ತೇವೆ. ಆ ಕೆಲವು ಕುಟುಂಬದವರು ಧನ್ಯವಾದ ತಿಳಿಸಿ ಈ ಉತ್ತಮ ಕಾರ್ಯವನ್ನು ಶ್ಲಾಘಿಸಿ ಮತ್ತೆ ಸಂಘದ ಸಾಂತ್ವನ ನಿಧಿಗಾಗಿ ದೇಣಿಗೆ ನೀಡಿರುತ್ತಾರೆ. ಸದಸ್ಯರು ಈ ಕಾರ್ಯದಲ್ಲಿ ಸಂಘಕ್ಕೆ ಕೈ ಜೋಡಿಸಲು ಕಳಕಳಿಯ ಮನವಿ.

ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸಬೇಕೆಂದು ಕೋರುತ್ತೇನೆ.



ಎಸ್. ಸೋಮಸುಂದರ
ಅಧ್ಯಕ್ಷರು

# ಪ್ರವಾಸದ ಚಿತ್ರಗಳು









## ಮೈ.ಮಂ.ದ್ರಾ.ಬೃಹಚ್ಚರಣ ಸಂಘ

**(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)**

### ಕಾರ್ಯಕಾರಿ ಸಮಿತಿ

**ಎಸ್. ಸೋಮಸುಂದರ, 9900113298**
ಅಧ್ಯಕ್ಷರು
**ಎಸ್. ಸತ್ಯನಾರಾಯಣ, 9980945699**
ಉಪಾಧ್ಯಕ್ಷರು
**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ
**ಹೆಚ್.ಕೆ. ಶಶಿಧರ್, 9845173766**
ಸಹ ಕಾರ್ಯದರ್ಶಿ
**ವಿ. ಅರುಣ್, 9880166001**
ಖಜಾಂಚಿ
**ಎನ್. ಶಿವಕುಮಾರ್, 9886505505**
ಆಂತರಿಕ ಲೆಕ್ಕ ಪರಿಶೋಧಕರು

**ಸದಸ್ಯರು**

**ಜಿ. ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಬಿ. ಸುಬ್ರಹ್ಮಣ್ಯಂ, 9449869667**
**ಆರ್. ಗಣೇಶ್ ಶ್ರೀಧರ್, 9880187686**
**ನಾಗೇಶ, 9980662118**
**ಟಿ.ಪಿ. ಸೂರ್ಯನಾರಾಯಣ, 9945484268**
**ಕೆ. ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್. ರಮೇಶ್, 9886034048**
**ಹೆಚ್.ಆರ್. ಲಲಿತಾ, 9945199637**
**ಆರ್.ಎ.ಶ್ಯಾಮಸುಂದರ್, 9845205674**
**ಆರ್.ಪಿ. ರವಿಶಂಕರ್, 9449696664**

**ಲೆಕ್ಕ ಪರಿಶೋಧಕರು**

**ಬಿ.ಎನ್. ಗೋವಿಂದ ಪ್ರಸಾದ್, 9845128229**

**"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿ**
**ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ**

**ಬಿ. ಸುಬ್ರಹ್ಮಣ್ಯಂ, 9449869667 –** ಸಂಪಾದಕರು

ಸದಸ್ಯರು
**ಎಸ್. ಸೋಮಸುಂದರ (ಸಂಘದ ಅಧ್ಯಕ್ಷರು)**
**ಎಸ್. ಸಿ. ಶ್ರೀನಿವಾಸ (ಸಂಘದ ಕಾರ್ಯದರ್ಶಿಗಳು)**
**ಎನ್. ಶಿವಕುಮಾರ್ (ಛಾಯಾಗ್ರಾಹಕರು)**

## ಕಾರ್ಯದರ್ಶಿಗಳ ನುಡಿ

ಸಂಘದ ಸದಸ್ಯರಿಗೆ ಮತ್ತು ಪರಿವಾರವರ್ಗದವರಿಗೆ ನಮಸ್ಕಾರಗಳು. ನಿಮ್ಮೆಲ್ಲರಿಗೂ ನೂತನ ಕ್ಯಾಲೆಂಡರ್ ವರ್ಷದ ಶುಭಾಶಯಗಳು! ನೂತನ ವರ್ಷದ (2024ರ) ಕ್ಯಾಲೆಂಡರ್ ಬಿಡುಗಡೆಯಾಗಿರುತ್ತದೆ. ಈಗಾಗಲೇ ಪಡೆದುಕೊಳ್ಳದೇ ಇದ್ದಲ್ಲಿ ದಯಮಾಡಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಿಂದ ಪಡೆದುಕೊಳ್ಳುವುದು.

ಕಳೆದ ವರ್ಷದ ಡಿಸೆಂಬರ್ ತಿಂಗಳ 10 ರ ಒಂದು ದಿನದ ಪ್ರವಾಸದಲ್ಲಿ ಪಾಲ್ಗೊಂಡು ಎಲ್ಲ ರೀತಿಯ ನೆರವು, ಸಹಕಾರಗಳನ್ನು ನೀಡಿದ ಪ್ರತಿಯೊಬ್ಬ ಸದಸ್ಯರಿಗೂ, ಸ್ನೇಹಿತರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಸದಸ್ಯರ ವಿಳಾಸ ಮತ್ತಿತರ ಸಂಪರ್ಕ ಮಾಹಿತಿಯು ಬದಲಾಗಿದ್ದಲ್ಲಿ ಇತ್ತೀಚಿನ ವಿವರಗಳನ್ನು ವಿಳಂಬಮಾಡದೇ ಆಡಳಿತಮಂಡಳಿಗೆ ತಿಳಿಸಬೇಕೆಂದು ಕೋರುತ್ತೇನೆ. ಇದು ಸಂಘದ ಕಾರ್ಯಕ್ರಮಗಳು ಮತ್ತಿತರ ಮಾಹಿತಿ ಸದಸ್ಯರನ್ನು ತಪ್ಪದೇ ತಲುಪುವಲ್ಲಿ ಸಹಕಾರಿ.



ಉತ್ತರಾಯಣ ಪುಣ್ಯಕಾಲ ಮತ್ತು ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಎಲ್ಲರಿಗೂ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

ಧನ್ಯವಾದಗಳು

**ಎಸ್.ಸಿ. ಶ್ರೀನಿವಾಸ**

************************************************

## ಸಂಪಾದಕೀಯ

ಬಂಧುಮಿತ್ರರೇ,

ನೂತನ ವರ್ಷದಲ್ಲಿ ನಿಮ್ಮೆಲ್ಲರೊಡನೆ ಈ ಮಾಧ್ಯಮದಲ್ಲಿ ಸಂವಹನ ನಡೆಸಲು ಸಂತಸವಾಗುತ್ತದೆ!

ಸಂಘದ ಕಾರ್ಯಕಾರಿ ಸಮಿತಿಯು ಈ ಸಂಚಿಕೆಯಿಂದ ಪ್ರಾರಂಭಿಸಿ "ಬೃಹಚ್ಚರಣ"ದ ಸಂಪಾದನ ಕಾರ್ಯವನ್ನು ನನಗೆ ವಹಿಸಿಕೊಟ್ಟಿದೆ. ಹಿಂದಿನ ಸಂಪಾದಕ ಶ್ರೀ ರಮೇಶ್ ಅವರು ಸಮರ್ಥವಾಗಿ ನಡೆಯಿಸಿಕೊಂಡು ಬರುತ್ತಿದ್ದ ಈ ಕಾರ್ಯವನ್ನು ಅದೇ ರೀತಿ ಮುಂದುವರೆಸಿಕೊಂಡುಹೋಗಲು (ಸಂಪಾದಕ ಮಂಡಲಿಯ ಸಹಕಾರದೊಂದಿಗೆ) ಯತ್ನಿಸುತ್ತೇನೆ. ಈ ನಿಟ್ಟಿನಲ್ಲಿ ಸಹೃದಯ ಸದಸ್ಯರ ಪ್ರೋತ್ಸಾಹ, ಸಹಕಾರಗಳನ್ನು ಬೇಡುತ್ತೇನೆ.

ಲೇಖನ ಹವ್ಯಾಸ ಉಳ್ಳ ಸದಸ್ಯರು ಮತ್ತವರ ಪರಿವಾರವರ್ಗದವರಿಂದ ವಿವಿಧ ವಿಷಯಗಳ ಕುರಿತು ಸಂಪಾದಕ ಮಂಡಲಿಯ ಪರವಾಗಿ ಲೇಖನಗಳನ್ನು ಆಹ್ವಾನಿಸುತ್ತಿದ್ದೇನೆ. ನಮ್ಮ ಆಚಾರ, ವಿಚಾರ, ಧಾರ್ಮಿಕ ಚಿಂತನೆ, ಕಲೆ, ಸಾಂಸ್ಕೃತಿಕ ವಿಷಯಗಳು ಅಷ್ಟೇ ಅಲ್ಲದೇ ಕ್ರೀಡೆ, ವಿಜ್ಞಾನ, ಪರಿಸರಗಳ ಬಗ್ಗೆ ಲೇಖನಗಳು ಅಪೇಕ್ಷಣೀಯ. ರಾಜಕೀಯ ಹಾಗೂ ವಾದವಿವಾದಕ್ಕೆ ಎಡೆಮಾಡಿಕೊಡುವಂಥ ಮತ್ತಿತರ ವಿಷಯಗಳ, ಮರ್ಯಾದೆಯ ಚೌಕಟ್ಟನ್ನು ಮೀರಿದ ಲೇಖನಗಳ ಪ್ರಕಟಣೆಗೆ ಅವಕಾಶವಿಲ್ಲ.

ಪ್ರವೃತ್ತರಾಗಿರಿ! ಕಾಗದ, ಪೆನ್ನುಗಳನ್ನು ಕೈಗೆತ್ತಿಕೊಳ್ಳಿ! ನಿಮ್ಮೊಳಗೆ ಸುಪ್ತವಾಗಿರಬಹುದಾದ ಲೇಖನ ಕಲೆಯನ್ನು ಸಾರ್ಥಕಪಡಿಸಿಕೊಳ್ಳಿ!

ಲೇಖನಗಳನ್ನು ಕೆಳಕಾಣಿಸಿದ ಅಂಚೆಯ ವಿಳಾಸಕ್ಕೆ ಅಥವಾ ಇ–ಮೇಲ್ ಗೆ ಕಳಿಸಬಹುದು.

ಸಂಪಾದಕರು, "ಬೃಹಚ್ಚರಣ"
27/1 ಬುಲ್ ಟೆಂಪಲ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು 560004 (ಶೇಖರ್ ಆಸ್ಪತ್ರೆ ಎದುರಿಗೆ)

ಇ–ಮೇಲ್: magazines@mmdbs.in



ಲೇಖನಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿರುತ್ತದೆ. ಲೇಖನಗಳ ಪ್ರಕಟಣೆಯ ಬಗ್ಗೆ ಸಂಪಾದಕ ಮಂಡಲಿಯ ತೀರ್ಮಾನವೇ ಅಂತಿಮ.

ಎಲ್ಲರಿಗೂ ಒಳ್ಳೆಯದಾಗಲಿ!

**–ಬಿ. ಸುಬ್ರಹ್ಮಣ್ಯಂ**

# ಗಡಿದಂ ಮತ್ತು ರಂಗಸ್ಥಳಕ್ಕೆ ಒಂದು ದಿನದ ಪ್ರವಾಸ – ದಿನಾಂಕ 10.12.2023



ಸಂಗೀತದಲ್ಲಿ ಶೃತಿಗೆ ಮೊದಲ ಪ್ರಾಮುಖ್ಯತೆ. ಶೃತಿಯು ಪ್ರಾರಂಭದಿಂದ ಅಂತ್ಯದವರೆಗೂ ಒಂದೇ ಸಮನೆ ಇದ್ದುಕೊಂಡು ಆಲಿಸುವ ಸಂಗೀತದಲ್ಲಿ ಅಪಸ್ವರ ಬರದಂತೆ ತನ್ನ ಚೌಕಟ್ಟಿನಲ್ಲೇ ಇರುವಂತೆ ಹಿಡಿದಿಟ್ಟಿರುತ್ತದೆ. ಮನಸ್ಸು ಶಿವಮಯವಾದ ಸಂಕಲ್ಪವುಳ್ಳದ್ದಾಗಲಿ ("ತನ್ಮೇ ಮನಃ ಶಿವಸಂಕಲ್ಪಮಸ್ತು") ಎಂಬ ಮಂತ್ರದಂತೆ ಸತ್ಸಂಕಲ್ಪದಿಂದ ಬೃಹಚ್ಚರಣ ಸಂಘವು ಹಮ್ಮಿಕೊಂಡಿದ್ದ ಪ್ರವಾಸವು ವ್ಯವಸ್ಥಿತವಾಗಿ ನೆರವೇರಿತು.

ನಮ್ಮ ಸಂಘವು, ಭಾನುವಾರ ದಿನಾಂಕ 10.12.2023ರಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಗಡಿದಂ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ ಮತ್ತು ರಂಗಸ್ಥಳದ ಶ್ರೀ ರಂಗನಾಥ ದೇವಸ್ಥಾನವನ್ನು ವಾರ್ಷಿಕ ಒಂದು ದಿನದ ಪ್ರವಾಸಕ್ಕಾಗಿ ಆಯ್ಕೆ ಮಾಡಿತ್ತು. ಕೋವಿಡ್ ಕಾರಣದಿಂದಾಗಿ ಈಗ 2–3 ವರ್ಷಗಳಿಂದ ಪ್ರವಾಸವನ್ನು ಹಮ್ಮಿಕೊಳ್ಳಲಾಗಿರಲಿಲ್ಲ. ಆದ್ದರಿಂದ ಈ ಬಾರಿ ಸಮುದಾಯದ ಸದಸ್ಯರು ಪ್ರವಾಸದಲ್ಲಿ ಪಾಲ್ಗೊಳ್ಳಲು ಕಾತುರರಾಗಿದ್ದರು. ಇದಕ್ಕೆ ತಮ್ಮ ಕುಟುಂಬದವರು, ಸ್ನೇಹಿತರು ಮತ್ತು ಸಂಘದ ಹಿತೈಷಿಗಳೊಂದಿಗೆ ಒಟ್ಟು 182 ಜನ 4 ಬಸ್ಸುಗಳಲ್ಲಿ ಈ ದಿವ್ಯ ಕ್ಷೇತ್ರಗಳ ದರ್ಶನಕ್ಕೆ ಭೇಟಿ ನೀಡಿದ್ದು ಸಾಕ್ಷಿಯಾಗಿತ್ತು. ತಮ್ಮ ಪಾಲ್ಗೊಳ್ಳುವಿಕೆಯನ್ನು ಸೂಕ್ತ ಸಮಯದಲ್ಲಿ ವ್ಯಕ್ತಪಡಿಸಿದ್ದರಿಂದ ಸಂಘವು ಸುಗಮವಾಗಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಏರ್ಪಡಿಸಲು ಅನುಕೂಲವಾಯಿತು. ಆಗಮಿಸಿದ ಪ್ರತಿಯೊಬ್ಬರೂ ದಿನಪೂರ್ತಿ ಪ್ರತಿ ಘಟ್ಟಗಳಲ್ಲೂ ನೀಡಿದ ಪೂರ್ಣ ಸಹಕಾರವನ್ನು ಪ್ರಶಂಸಿಸಲೇಬೇಕು. ಈಗ ಲಭ್ಯವಿರುವ ವಾಟ್ಸಾಪ್ ಅನುಕೂಲದಿಂದ ಸಂಘವು ಪ್ರತಿ ಪ್ರವಾಸಿಗಳಿಗೂ ಅಗತ್ಯವಾದ ಮಾಹಿತಿಗಳನ್ನು ನೀಡಲು ಸುಲಭವಾಯಿತು.

ಬಸವನಗುಡಿಯ ದ್ವಾರಕಾನಾಥ ಭವನದ ಬಳಿಯಿಂದ ಬೆಳಿಗ್ಗೆ 7.00 ಘಂಟೆಗೆ ಎ, ಬಿ, ಸಿ, ಡಿ ಎಂದು ಗುರುತಿಸಲಾದ ಬಸ್ಸುಗಳಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಸಮಯಕ್ಕೆ ಸರಿಯಾಗಿ ಆಗಮಿಸಿದ ಬಾಂಧವರನ್ನು ಹತ್ತಿಸಿಕೊಂಡು ಪ್ರವಾಸವನ್ನು ಪ್ರಾರಂಭಿಸಿದೆವು.. ಎಲ್ಲಾ ಬಸ್ಸುಗಳಿಗೆ ಹತ್ತಲು ಅನುಕೂಲವಾಗುವಂತೆ ನಾಲ್ಕು ಸ್ಟೂಲ್ ಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಕೆಲವು ಪ್ರವಾಸಿಗರು ಹೆಬ್ಬಾಳದ ಎಸ್ಟೀಮ್ ಮಾಲ್ ಬಳಿ ಹತ್ತಿಕೊಳ್ಳುವುದು ಮೊದಲೇ ನಿರ್ಧಾರವಾಗಿತ್ತು. ಪ್ರತಿ ಬಸ್ಸಿನಲ್ಲಿ ಮೂರರಿಂದ ನಾಲ್ಕು ಕಾರ್ಯಕಾರಿ ಸಮಿತಿ ಸದಸ್ಯರು ಇದ್ದು ಆಗಮಿಸಿದ ಪ್ರವಾಸಿಗರನ್ನು ಸ್ವಾಗತಿಸಿದರು. ಪ್ರತಿ ಬಸ್ಸಿನಲ್ಲಿ 40–45 ಜನರಿಗೆ ಕುಳಿತುಕೊಳ್ಳಲು ವ್ಯವಸ್ಥೆಯಾಗಿತ್ತು.

ಪ್ರಯಾಣದ ಪ್ರಾರಂಭದಲ್ಲಿ ಭಗವಂತನ ನಾಮಸ್ಮರಣೆ ಮತ್ತು ಜೈಕಾರ ಮಾಡಲಾಯಿತು. ಬಸ್ಸುಗಳು ಹೊರಟ ನಂತರ ಕಾರ್ಯಕಾರಿ ಸಮಿತಿ ಸದಸ್ಯರು ಪ್ರತಿಯೊಬ್ಬರಿಗೂ ಒಂದು ಚೀಲ, ಕೈವಸ್ತ್ರ, 2 ನೀರಿನ ಬಾಟಲ್, 2 ಕಿತ್ತಲೆ ಹಣ್ಣು, 2 ಬಿಸ್ಕತ್ ಪೊಟ್ಟಣ, ಮತ್ತು ಒಂದು ಕುರುಕಲು ತಿಂಡಿಗಳ ಪ್ಯಾಕೆಟ್ಗಳನ್ನು ವಿತರಿಸಿದರು. ಪೋಷಕರಾದ ಶ್ರೀ ಆರ್.ಎಸ್. ರಮೇಶ್ ಅವರು ಕಿತ್ತಳೆಹಣ್ಣನ್ನು, ಮಹಾ ಪೋಷಕರಾದ ಶ್ರೀ ಆರ್.ಎಸ್. ಗುರುಪ್ರಸಾದ್ ಅವರು ಕುಡಿಯುವ ನೀರಿನ ಬಾಟಲ್ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದರು. ಪ್ರವಾಸದಲ್ಲಿ ಭಾಗವಹಿಸಿದ್ದ ನಮ್ಮ ಸಮುದಾಯದವರು, ಹೊಸ ಪರಿಚಯದವರು ಎಲ್ಲರೂ ಪರಸ್ಪರ ಪರಿಚಯ, ಮಾತುಕತೆ ಮಾಡಿಕೊಳ್ಳುತ್ತಿದ್ದುದು ವಿಶೇಷವಾಗಿತ್ತು.

ಸುಮಾರು 10 ಘಂಟೆಗೆ ಗಡಿದಂ ಕ್ಷೇತ್ರಕ್ಕೆ ತಲುಪಿದೆವು. ಎಲ್ಲರೂ ಬಣ್ಣ ಬಣ್ಣದ ಹೂವುಗಳು, ಬಂಗಾರದ ಕವಚದಿಂದ ಕಂಗೊಳಿಸುತ್ತಿದ್ದ ಶ್ರೀ ಲಕ್ಷ್ಮಿ, ಪದ್ಮಾವತಿ ಸಹಿತ ಶ್ರೀ ವೆಂಕಟರಮಣನ ದರ್ಶನ ಪಡೆದರು. ಕೆಲವರು ಸಂಕಲ್ಪಸಹಿತ ಅರ್ಚನೆ ಮಾಡಿಸಿ ಮಂಗಳಾರತಿ, ತೀರ್ಥ ಪಡೆದು ಧನ್ಯರಾದರು. ನಂತರ ಎಲ್ಲರೂ ಬೆಳಗಿನ ಉಪಹಾರವಾಗಿ ಇಡ್ಲಿ, ವಡೆ, ಖಾರಾ ಪೊಂಗಲ್, ಕಾಶೀ ಹಲ್ವಾ, ಕಾಫಿ, ಟೀಗಳನ್ನು ಸ್ವೀಕರಿಸಿದರು. ಸ್ವಲ್ಪ ವಿಶ್ರಮಿಸಿಕೊಳ್ಳುವ ಹೊತ್ತಿಗೆ ದೇವಸ್ಥಾನದ ಆವರಣದಲ್ಲಿ ಗರುಡಾರೂಢನಾದ ಶ್ರೀ ವೆಂಕಟರಮಣಸ್ವಾಮಿಯ ಉತ್ಸವ ಮೂರ್ತಿಯ ಪ್ರಾಕಾರೋತ್ಸವವು ಪ್ರಾರಂಭವಾಯಿತು. ಉತ್ಸವದೊಂದಿಗೆ ಮೂರು ಪ್ರದಕ್ಷಿಣೆ ಮಾಡುವಾಗ

ಸುಶ್ರಾವ್ಯವಾದ ಮಂಗಳವಾದ್ಯ ಓಲಗ, ಡೋಲು ಸ್ವರವು ಪ್ರತಿಯೊಬ್ಬರ ಹೃದಯವನ್ನು ಹೊಕ್ಕು ದೈವವನ್ನು ಮನದಲ್ಲಿ ತುಂಬಿಕೊಳ್ಳುವಂತಾಯಿತು.

ಶ್ರೀ ವಿಷ್ಣುಸಹಸ್ರನಾಮವನ್ನು ಸಾಮೂಹಿಕವಾಗಿ ಪಾರಾಯಣ ಮಾಡಲಾಯಿತು. ನಮ್ಮ ಸದಸ್ಯರ ಒಡನಾಡಿಗಳಾದ ಕೆಲವು ವೇದಾಧ್ಯಾಯಿಗಳು ಭಕ್ತಿಪೂರ್ವಕವಾಗಿ ವೇದ ಮಂತ್ರಗಳನ್ನು ಪಠಿಸಿದರು.

ಕಾರ್ಯಕಾರಿ ಸಮಿತಿಯು ಮೊದಲೇ ನಿರ್ಧರಿಸಿದಂತೆ 2024ನೇ ವರ್ಷದ ಕ್ಯಾಲೆಂಡರನ್ನು ಈ ಸಂದರ್ಭದಲ್ಲಿ ಅಲ್ಲಿ ನೆರೆದಿದ್ದ ಹಿರಿಯರ ಮೂಲಕ ಬಿಡುಗಡೆ ಮಾಡಿಸಲಾಯಿತು. ಪ್ರವಾಸಿಗಳಿಗೆಲ್ಲಾ ಅದನ್ನು ವಿತರಿಸಲಾಯಿತು. ಕ್ಯಾಲೆಂಡರ್ ಒಯ್ಯಲು ಅನುಕೂಲವಾಗುವಂತೆ ರಬ್ಬರ್ ಬ್ಯಾಂಡ್ ಗಳನ್ನು ಹಾಕಲು ಯೋಜಿಸಲಾಗಿತ್ತು. ಇದಕ್ಕೆ ಮಹಿಳೆಯರು ಮುಂದೆ ಬಂದು ಕ್ಯಾಲೆಂಡರ್ ಸುತ್ತಿ ರಬ್ಬರ್ ಬ್ಯಾಂಡ್ ಹಾಕಲು ಸಹಕರಿಸಿದರು.

ಅಖಂಡ ಭಜನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದ ಸ್ಥಳೀಯ ಹಳ್ಳಿಗಳಿಂದ ಬಂದಿದ್ದ ಭಜನಾ ಮಂಡಲಿಯ ಸದಸ್ಯರ ಭಜನೆ ಅಂದು 372ನೇ ದಿನವಾಗಿದ್ದು, ಅವರುಗಳು ಶ್ರದ್ಧಾಭಕ್ತಿಗಳಿಂದ ಭಜನೆ ಮಾಡುವುದನ್ನು ಕಂಡು ಎಲ್ಲರೂ ಮೂಕವಿಸ್ಮಿತರಾದರು.

ಎಲ್ಲರೂ ಮತ್ತೆ ದೇವರ ದರ್ಶನ ಮಾಡಿ ಪ್ರಸಾದ ರೂಪವಾಗಿ ತೆಂಗಿನಕಾಯಿ ಹೋಳು, ಹಣ್ಣು, ಹೂವು, ತುಳಸಿ ಪಡೆದು ಕೃತಾರ್ಥರಾದರು. ನಂತರ ಭೋಜನದ ಏರ್ಪಾಡಾಗಿತ್ತು. ಶುಚಿ–ರುಚಿಯಾದ ಬೇಳೆ ಒಬ್ಬಟ್ಟು, ಆಂಬೊಡೆಯೊಂದಿಗೆ ಪೂರ್ಣ ಬಾಳೆಎಲೆ ಊಟವನ್ನು ಎಲ್ಲರೂ ಸ್ವೀಕರಿಸಿದರು. ಸಂಘದ ಪೋಷಕ ಮತ್ತು ಲೆಕ್ಕ ಪರಿಶೋಧಕರಾದ ಶ್ರೀ ಬಿ.ಎನ್. ಗೋವಿಂದ ಪ್ರಸಾದ್‌ರವರು ಬಾದಾಮಿ ಹಲ್ವಾ ಮತ್ತು ಚೌಚೌ ಪ್ರಾಯೋಜಿಸಿದ್ದರು. ಇದನ್ನು ಭೋಜನದ ಸಮಯದಲ್ಲಿ ಅವರ ಮೂಲಕವೇ ಪ್ರತಿಯೊಬ್ಬರಿಗೂ ವಿತರಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಹಿರಿಯ ಪೋಷಕರಾದ ಶ್ರೀ ಕೆ. ಗುಂಡಪ್ಪ, ಮಹಾ ಪೋಷಕರಾದ ಶ್ರೀಮತಿ ಕೆ.ಅಂಜನಿ, ಪೋಷಕ ಶ್ರೀ ಜಿ. ಮುತ್ತುಸ್ವಾಮಿಯವರು ಪ್ರಸಾದರೂಪವಾದ ಎರಡು ಲಾಡುಗಳ ಪ್ಯಾಕೆಟ್‌ಗಳನ್ನು ಪ್ರಾಯೋಜಿಸಿದ್ದರು.

ವಿಶ್ರಾಂತಿಯ ನಂತರ ಮಧ್ಯಾಹ್ನ ಸುಮಾರು 2.30ಕ್ಕೆ ರಂಗಸ್ಥಳಕ್ಕೆ ಪ್ರವಾಸ ಮುಂದುವರೆಯಿತು. ಅಲ್ಲಿಯೂ ಶ್ರೀದೇವಿ, ಭೂದೇವಿ ಸಹಿತ ಶ್ರೀ ರಂಗನಾಥನ ದರ್ಶನ ಪಡೆಯುವ ಹೊತ್ತಿಗೆ ಉತ್ಸವ ಮೂರ್ತಿಗಳೊಂದಿಗೆ ಪ್ರಾಕಾರೋತ್ಸವ ಪ್ರಾರಂಭವಾಯಿತು.

ಭಕ್ತಾದಿಗಳು ಇದರಲ್ಲಿ ಪಾಲ್ಗೊಳ್ಳುವಂತೆ ಭಗವಂತನಿಗೆ ಚಾಮರ ಸೇವೆ ಕೈಂಕರ್ಯ ಮಾಡಲು ದೇವಸ್ಥಾನದ ಆಡಳಿತ ಮಂಡಳಿಯು ಅವಕಾಶ ಮಾಡಿಕೊಟ್ಟಿತು. ಈ ಸೇವೆಯಲ್ಲಿ ಪಾಲ್ಗೊಂಡವರು ಧನ್ಯತೆಯನ್ನು ಪಡೆದಂತೆ ತಮ್ಮ ದಿನನಿತ್ಯದ ವ್ಯಾವಹಾರಿಕತೆಯನ್ನು ಮರೆತು ಈ ಸುಂದರ ಕ್ಷಣಗಳನ್ನು ಭಕ್ತಿಯಿಂದ ಹೃದಯ ತುಂಬಿಕೊಂಡರು. ಇಲ್ಲಿಯೂ ಓಲಗ, ಡೋಲು ವಾದನ ಬಹಳ ಮನಮೋಹಕವಾಗಿತ್ತು. ವಿವಿಧ ರಾಗಗಳಲ್ಲಿ ಹಾಡುಗಳನ್ನು ನುಡಿಸಿದ್ದು ವಿಶೇಷವಾಗಿತ್ತು. ಈ ರೋಮಾಂಚಕ ಅನುಭವವನ್ನು ಅನಿರ್ವಚನೀಯ ಎಂದು ತಮ್ಮ ತಮ್ಮಲ್ಲಿ ಹೇಳಿಕೊಳ್ಳುತ್ತಿದ್ದರು.

ಪುರೋಹಿತರು ಸಾಮೂಹಿಕವಾಗಿ ಸಂಕಲ್ಪ ಹೇಳಿಕೊಟ್ಟು ಅಷ್ಟೋತ್ತರ ಸಹಿತ ಪೂಜೆ ಮಾಡಿದರು ಮತ್ತು ದೇವಸ್ಥಾನದ ಹಿನ್ನೆಲೆಯನ್ನು ಹೇಳುತ್ತಾ ಭಗವಂತನು ಆದಿರಂಗ, ಮಧ್ಯರಂಗ, ಅಂತ್ಯರಂಗ ಅಲ್ಲದೇ ಈ ಕ್ಷೇತ್ರವು ಮೋಕ್ಷಕ್ಕೆ ಮಾರ್ಗವಾದ ಮೋಕ್ಷರಂಗನಾಗಿ ನೆಲೆಸಿರುವುದನ್ನು ತಿಳಿಸಿ, ವೈಷ್ಣವ ಸಂಪ್ರದಾಯದಂತೆ 108 ದಿವ್ಯ ಕ್ಷೇತ್ರಗಳಲ್ಲಿ ಒಂದಾಗಿರುವುದು ವಿಶೇಷ ಎಂದರು. ಶ್ರೀ ರಂಗನಾಥನು ವೈಕುಂಠದ ಪಾಲ್ಗಡಲಲ್ಲಿ ಪವಡಿಸಿರುವಾಗ ಬ್ರಹ್ಮ ಶಿವರೊಂದಿಗೆ ಇರುವಂತೆಯೇ ಇಲ್ಲೂ ಗರ್ಭಗುಡಿಯಲ್ಲಿ ಶಿಲ್ಪ ಕೆತ್ತನೆ ಕಾಣಬಹುದು. ದಾಸ ಶ್ರೇಷ್ಠರಾದ ಶ್ರೀ ಪುರಂದರದಾಸರು, ಶ್ರೀ ಕನಕದಾಸರ ದೇವರ ನಾಮಗಳಲ್ಲಿ ಈ ಕ್ಷೇತ್ರದ, ಭಗವಂತನ ವರ್ಣನೆ ಇರುವುದನ್ನು ತಿಳಿಸಿದರು. ಇದನ್ನೆಲ್ಲಾ ಆಲಿಸಿದ ಮೇಲಂತೂ ಎಲ್ಲರೂ ಮಂತ್ರಮುಗ್ಧರಾದರು. ಪೂಜೆ, ಉತ್ಸವದ ನಂತರ ಮಂಗಳಾರತಿ, ತೀರ್ಥ ಮತ್ತು ಪ್ರಸಾದ ವಿತರಿಸಿದರು.

ರಂಗಸ್ಥಳ ಕ್ಷೇತ್ರದಲ್ಲಿ ಕಾರ್ತಿಕ ಮಾಸದ ಸಲುವಾಗಿ ಸಂಜೆ ಮಹಿಳೆಯರು ದೀಪ ಬೆಳಗಿಸಿದರು. ಈ ಕಾರ್ಯಕ್ಕಾಗಿ ಹಣತೆ, ಎಣ್ಣೆ, ಬತ್ತಿ, ಕರ್ಪೂರ, ಬೆಂಕಿ ಪೆಟ್ಟಿಗೆಗಳನ್ನು ಸಂಘದ ಕಾರ್ಯದರ್ಶಿಯಾದ ಶ್ರೀ ಎಸ್.ಸಿ. ಶ್ರೀನಿವಾಸರವರು ಏರ್ಪಾಡುಗಳನ್ನು ವ್ಯಕ್ತಿಗತವಾಗಿ, ವ್ಯವಸ್ಥಿತವಾಗಿ ಮತ್ತು ನಿಖರವಾಗಿ ನಡೆಯುವಂತೆ ಜವಾಬ್ದಾರಿ ವಹಿಸಿಕೊಂಡಿದ್ದು ಸಂಘಕ್ಕೆ ಹೆಮ್ಮೆಯ ವಿಷಯ.

ಎರಡೂ ದೇವಸ್ಥಾನಗಳಲ್ಲಿ ವಿಶೇಷ ಅನುಭೂತಿಗಳನ್ನು ಪಡೆದು ಬೆಂಗಳೂರಿನತ್ತ ಹೊರಟ ಪ್ರವಾಸಿಗರು ಸಂಜೆ ಚಿಕ್ಕಬಳ್ಳಾಪುರದಲ್ಲಿನ ಒಂದು ಛತ್ರದಲ್ಲಿ ಕಾಫಿ ಸ್ವೀಕರಿಸಿದರು. ರಾತ್ರಿ ಫಲಾಹಾರ ರೂಪವಾಗಿ ಅವರೆಕಾಯಿ ಉಪ್ಪಿಟ್ಟು ಮತ್ತು ಮೊಸರು ಅವಲಕ್ಕಿಯ ಡಬ್ಬಗಳನ್ನು ಅಚ್ಚುಕಟ್ಟಾಗಿ ಪ್ಯಾಕ್ ಮಾಡಿ ಪ್ರತಿಯೊಬ್ಬರಿಗೂ ಕೊಡಲಾಯಿತು. ಕೆಲವು ಬಸ್ಸುಗಳಲ್ಲಿ ವಿವಿಧ ಹಾಡು, ನೃತ್ಯ ಮತ್ತು ಆಟಗಳಲ್ಲಿ ಪಾಲ್ಗೊಂಡಿದ್ದು ಮೈಮನಗಳು ತಣಿದಂತಾದವು ಎಂದು ತಮಗಾದ ಅನುಭವಗಳನ್ನು ಹಂಚಿಕೊಳ್ಳುತ್ತಾ ಕಾರ್ಯಕಾರಿ ಸಮಿತಿಯು ಮಾಡಿದ ಏರ್ಪಾಡುಗಳಿಗೆ ಪ್ರವಾಸಿಗರು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮ ಯಶಸ್ವಿಯಾಗಲು ಏರ್ಪಾಡು ಮಾಡುವುದರೊಂದಿಗೆ ಭಾಗವಹಿಸಿದವರೆಲ್ಲರೂ ಸಹಕರಿಸಿದ್ದು ಶ್ಲಾಘನೀಯ.

ಬಸ್ಸುಗಳು ರಾತ್ರಿ 9.30ಕ್ಕೆ ಮತ್ತೆ ದ್ವಾರಕನಾಥ ಭವನದ ಬಳಿ ತಲುಪಿತು. ಕೆಲವರು ಮಾರ್ಗಮಧ್ಯದಲ್ಲಿ ಇಳಿಯಲು ಅನುಕೂಲ ಮಾಡಲಾಗಿತ್ತು. ಪ್ರವಾಸವು ಸುಗುಮವಾಗಿರಲು ಕಾರಣಕರ್ತರಾದ ಬಸ್ಸಿನ ಚಾಲಕ ತಂಡಕ್ಕೆ ಧನ್ಯವಾದಗಳನ್ನು ಅರ್ಪಿಸಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರು ಪಾಲ್ಗೊಂಡವರಿಗೆ ಪ್ರತಿ ಬಸ್ಸಿನಲ್ಲೂ ವಂದನೆ ಸಲ್ಲಿಸಿ ಸಂಘಕ್ಕೆ ಸಮುದಾಯದವರು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಯುವ ಪೀಳಿಗೆಯವರು ಮುಂದೆ ಬರಬೇಕೆಂದು ವಿನಂತಿಸಿದರು.

ರಾತ್ರಿ ಸುಮಾರು 10.30ರ ಹೊತ್ತಿಗೆ ಎಲ್ಲರೂ ತಮ್ಮ ವಸತಿಗಳನ್ನು ಸೇರಿದ್ದು ವಾಟ್ಸಾಪ್ಪ್‌ನಲ್ಲಿ ಹಂಚಿಕೊಳ್ಳುತ್ತಾ ತಾವು ವೀಕ್ಷಿಸಿದ ಕ್ಷಣಗಳ ಛಾಯಾಚಿತ್ರ, ವಿಡಿಯೋಗಳನ್ನು ಹಂಚಿಕೊಂಡರು. ಇಡೀ ದಿನ ಕಾರ್ಯಕ್ರಮ, ಪೂಜೆ, ಉತ್ಸವ, ದರ್ಶನ, ತಿಂಡಿ, ಭೋಜನ, ಅವರಿಗೆ ಕೊಟ್ಟ ವಸ್ತುಗಳಿಗೆ, ಶೌಚಾಲಯ ವ್ಯವಸ್ಥೆ, ಮತ್ತಿತರ ಯೋಜನೆಗಳನ್ನು ಶ್ಲಾಘಿಸುತ್ತಾ ಮುಂದೆಯೂ ಇಂತೆಯೇ ಪ್ರವಾಸಗಳಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿರುವುದನ್ನು ವ್ಯಕ್ತಪಡಿಸಿದರು. ಪ್ರವಾಸದಲ್ಲಿ ಪಾಲ್ಗೊಂಡವರಿಗೆ ಮುತುವರ್ಜಿ ವಹಿಸಿ ಯಾವುದೇ ಅನಾನುಕೂಲತೆಯಾಗದಂತೆ ಕೆಲವು ಚಿಕ್ಕ ಚಿಕ್ಕ ವ್ಯವಸ್ಥೆಗಳನ್ನು ಮಾಡಿದ್ದನ್ನು ಪ್ರವಾಸಿಗರು ಗುರುತಿಸಿ ಶ್ಲಾಘಿಸಿದರು. ಈ ಪ್ರಶಂಸೆ, ಶ್ಲಾಘನೆಗಳನ್ನು ಕೇಳಿ ಸಂಘಕ್ಕೆ ಮುಂದೆ ಪ್ರವಾಸಗಳನ್ನು ಏರ್ಪಡಿಸಲು ಉತ್ಸಾಹ ಬರುವಂತಾಯಿತು.

ಭಾನುವಾರದ ಇಡೀ ದಿನದ ಕಾರ್ಯಕ್ರಮವನ್ನು ಏರ್ಪಡಿಸಲು ಕಾರ್ಯಕಾರಿ ಸಮಿತಿಯೊಂದಿಗೆ ಹಲವಾರು ಸಭೆಗಳನ್ನು ನಡೆಸಿ, ಈ ಕ್ಷೇತ್ರಗಳಿಗೆ 2–3 ಬಾರಿ ಭೇಟಿ ನೀಡಿ ಯಾವುದೇ ತೊಂದರೆಯಾಗದಂತೆ ಸುವ್ಯವಸ್ಥಿತವಾಗಿ ನಡೆಯಲು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಸಂಪೂರ್ಣ ಸಹಕಾರದೊಂದಿಗೆ ಈ ಪ್ರವಾಸ ಯಶಸ್ವಿಯಾಯಿತು. ಹಾಗೆಯೇ ಗಡಿದಂ ದೇವಾಲಯದ ಪುರೋಹಿತರಾದ ಶ್ರೀ ಪ್ರಕಾಶ್ ಮತ್ತು ಅವರ ಸಂಗಡಿಗರು, ರಂಗಸ್ಥಳ ದೇವಸ್ಥಾನದ ಪುರೋಹಿತರಾದ ಶ್ರೀ ಶೇಷಾದ್ರಿ ಭಟ್ ಮತ್ತು ಅವರ ಮಕ್ಕಳು, ಬಾಣಸಿಗರಾದ ಶ್ರೀ ರಾಮಮೂರ್ತಿ ಮತ್ತು ಶ್ರೀ ರಂಗನಾಥ್‌ರವರಿಗೆ ಸಂಘವು ಧನ್ಯವಾದಗಳನ್ನು ತಿಳಿಸುತ್ತದೆ. ಎಲ್ಲಾ ಪ್ರಾಯೋಜಕರಿಗೂ ಸಂಘದ ವತಿಯಿಂದ ಆತ್ಮೀಯ ಧನ್ಯವಾದಗಳು.



**ಹೆಚ್.ಆರ್. ಲಲಿತಾ**
**9945199637**

*********************************************************************************************



## ನಿನಗರ್ಪಿತ ರಾಮ

ನಿನಗರ್ಪಿತ ರಾಮ ನಿನಗರ್ಪಿತ
ನಿನಗರ್ಪಿತ ಕೃಷ್ಣ ನಿನಗರ್ಪಿತ
ಅನುದಿನವೂ ನಾಗೈದ ಪಾಪಪುಣ್ಯದ ಫಲ
ನಿನಗರ್ಪಿತ ರಾಮ ನಿನಗರ್ಪಿತ

ಎನ್ನಯ ನಡೆನುಡಿಯು ನಿನಗರ್ಪಿತ
ಎನ್ನಯ ತನುಮನವು ನಿನಗರ್ಪಿತ
ಎನ್ನಯ ಉಸಿರು ಸಹ ನಿನಗರ್ಪಿತ
ಎನ್ನಯ ಪ್ರಾಣವು ನಿನಗರ್ಪಿತ

ಪರರನ್ನ ನಿಂದಿಸಲು ನಿನಗರ್ಪಿತ
ಪರರನ್ನ ವಂದಿಸಲು ನಿನಗರ್ಪಿತ
ಪರರೊಳಗೆ ನೀ ದೂರಿ ಪರಮಧರದಿಂದ
ಪಾಮರರ ಪಾಲಿಪುದು ನಿನಗರ್ಪಿತ



**ಡಿ.ಎಸ್.ಗಾಯತ್ರಿ**
**8050539971**

# ವಿದ್ಯೆಯೆಂಬ ಅಳಿಯದ ಸಂಪತ್ತು...

॥ ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ ॥

ವಿದ್ಯೆ ಎಂಬ ಪದ 'ವಿದ್'ಎಂಬ ಸಂಸ್ಕೃತ ಶಬ್ಧದಿಂದ ಉತ್ಪತ್ತಿಯಾಗಿದೆ. 'ವಿದ್' ಎಂದರೆ ಜ್ಞಾನ, ಅರಿವು, ತಿಳುವಳಿಕೆ ಎಂಬುದಾಗಿದೆ.

ಸದ್ವಿದ್ಯೆ ಎಂದರೆ ಸರಿಯಾದ ಜ್ಞಾನ ಅಥವಾ ಸ್ಪಷ್ಟತೆ ಎಂದರ್ಥ. ವಿದ್ಯೆ ಎಂಬುದು ನಮ್ಮ ವ್ಯಕ್ತಿತ್ವದಲ್ಲಿ ಸರ್ವಾಂಗೀಣ ವಿಕಾಸವನ್ನುಂಟುಮಾಡಬೇಕು. 'ಸಾ ವಿದ್ಯಾ ಯಾ ವಿಮುಕ್ತಯೇ' ಅಂದರೆ ಯಾವ ವಿದ್ಯೆಯು ಮೋಕ್ಷಕ್ಕೆ ಅಂದರೆ ಸಂಸಾರವೆಂಬ ಬಂಧನದಿಂದ ವಿಮುಕ್ತಿ ಕೊಡುವುದೋ ಅದೇ ನಿಜವಾದ ವಿದ್ಯೆ ಎಂದು ಹೇಳಲಾಗುತ್ತದೆ. ವಿದ್ಯೆಯಲ್ಲಿ ನಮ್ಮ ಆಧ್ಯಾತ್ಮಿಕ ವಿಕಾಸವನ್ನುಂಟು ಮಾಡುವ ಹಾಗೂ ಆತ್ಮೋನ್ನತಿಗೆ ಕಾರಣವಾದ, ಶ್ರೇಯಸ್ಸನ್ನುಂಟು ಮಾಡುವ ವಿದ್ಯೆ 'ಪರಾವಿದ್ಯೆ' ಎನಿಸಿಕೊಂಡರೆ, ಲೌಕಿಕ ಜೀವನ ನಡೆಸಲು ಅಗತ್ಯವಾದ ಸಂಪತ್ತನ್ನು ಪಡೆಯಲು ಅನುವು ಮಾಡಿಕೊಡುವ ವಿದ್ಯೆಯನ್ನು 'ಅಪರಾ ವಿದ್ಯೆ' ಎನ್ನಲಾಗುತ್ತದೆ. ಇದನ್ನು ಪ್ರೇಯಸ್ಸು ಎನ್ನಲಾಗುತ್ತದೆ. ವಿದ್ಯೆಯ ಪರಮೋದ್ದೇಶ ಮಾನವನ ಆಧ್ಯಾತ್ಮಿಕ, ಶೈಕ್ಷಣಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಉನ್ನತಿಯೇ ಆಗಿದ್ದು ತನ್ಮೂಲಕ ಇಡೀ ಜಗತ್ತಿನ ಒಳಿತನ್ನು ಸಾಧಿಸುವುದೇ ಆಗಿದೆ. ಅರ್ಥಾತ್ ಮಾನವ ಕಲ್ಯಾಣವೇ ಆಗಿದೆ. ಆ ಮೂಲಕ 'ವಸುದೈವ ಕುಟುಂಬಕಮ್' ಸಾಧಿಸುವುದಾಗಿದೆ.

ಕವಿರಾಜ ಭರ್ತೃಹರಿಯು ತನ್ನ ನೀತಿ ಶತಕದಲ್ಲಿ ವಿದ್ಯೆಯ ಮಹತ್ವ ಹಾಗೂ ವಿದ್ವಾಂಸರ ಗರಿಮೆ ಹಿರಿಮೆಗಳನ್ನು ಬಹು ಸೊಗಸಾಗಿ ವರ್ಣಿಸಿದ್ದಾರೆ.

ಅವುಗಳಲ್ಲಿ ಒಂದು ಶ್ಲೋಕ ಹೀಗಿದೆ.

**ವಿದ್ಯಾನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನ ಗುಪ್ತಂ ಧನಮ್ ।**
**ವಿದ್ಯಾ ಭೋಗಕರೀ ಯಶಃ ಸುಖಕರೀ ವಿದ್ಯಾ ಗುರೂಣಾಂ ಗುರುಃ ॥**
**ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾ ಪರಾ ದೇವತಾ ॥**
**ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ ವಿದ್ಯಾ ವಿಹೀನಃ ಪಶುಃ ॥**

ಈ ಶ್ಲೋಕದ ಅರ್ಥವೇನೆಂದರೆ ವಿದ್ಯೆಯು ಇಹಪರಗಳಿಗೆ ಶ್ರೇಯಸ್ಕರವಾದುದು. ವಿದ್ಯೆಯೇ ಮನುಜನಿಗೆ ರೂಪ ಸೌಂದರ್ಯವು. ವಿದ್ಯೆ ಇಲ್ಲದವನ ರೂಪ ಸೌಂದರ್ಯಗಳು ಮುತ್ತುಗದ ಮರದಂತೆ ಉಪಯೋಗಕ್ಕೆ ಬಾರದು. ವಿದ್ಯೆಯು ಗುಪ್ತ ನಿಧಿಯಂತೆ. ಹಣದ ರಕ್ಷಣೆಗೆ ಕಷ್ಟ ಪಡಬೇಕಾಗುವುದು ಆದರೆ ಅಮೂಲ್ಯವಾದ ವಿದ್ಯಾ ಸಂಪತ್ತಿನ ರಕ್ಷಣೆಗೆ ಕಷ್ಟಪಡಬೇಕಿಲ್ಲ. ವಿದ್ಯೆಯೇ ಸ್ವತಃ ದೇವತೆಯಂತೆ. ವಿದ್ಯೆಯಿಂದ ಕೀರ್ತಿ ಯಶಸ್ಸು ಲಭಿಸಿ ಅಮಿತ ಆನಂದ ತೃಪ್ತಿ ಲಭ್ಯವಾಗುತ್ತದೆ.

ವಿದ್ಯೆಯ ಮಹತ್ವವನ್ನು ಎತ್ತಿಹಿಡಿಯುವ ಇನ್ನೊಂದು ಸುಭಾಷಿತ ಇಂತಿದೆ

**ನ ಚೋರಹಾರ್ಯಂ ನ ಚ ರಾಜಹಾರ್ಯಂ ನ**
**ಭ್ರಾತೃ ಭಾಜ್ಯಮ್ ನ ಚ ಭಾರಕಾರೀ ।**
**ವ್ಯಯೇ ಕೃತೇ ವರ್ಧತ ಏವ ನಿತ್ಯಂ ವಿದ್ಯಾಧನಂ**
**ಸರ್ವ ಧನ ಪ್ರಧಾನಮ್ ॥**

ಅಂದರೆ ಯಾವ ಕಳ್ಳನಿಂದಲೂ ಕದಿಯಲಾಗದ, ರಾಜನಿಂದಲೂ ಕಸಿದುಕೊಳ್ಳಲು ಸಾಧ್ಯವಾಗದ ಅಣ್ಣತಮ್ಮಂದಿರ ನಡುವೆ ಭಾಗಮಾಡಿ ಹಂಚಿಕೊಳ್ಳಲು ಸಾಧ್ಯವಾಗದ, ವ್ಯಯಿಸಿದಷ್ಟೂ ಹೆಚ್ಚಾಗುತ್ತಲೇ ಹೋಗುವ ವಿದ್ಯೆಯೆಂಬ ಧನವು ಎಲ್ಲಾ ಧನಗಳಲ್ಲಿ ಪರಮ ಶ್ರೇಷ್ಠವಾದದ್ದು ಮತ್ತು ಅದು ಎಂದೂ ಅಳಿಯದ ಸಂಪತ್ತಾಗಿದೆ.

ಇನ್ನು ವಿದ್ಯೆಯನ್ನು ಕುರಿತು ಕನ್ನಡದ ಶ್ರೇಷ್ಠ ಕವಿ ಸರ್ವಜ್ಞನ ವಚನಗಳು ಬಹು ಪ್ರಸಿದ್ಧ ವಾದವು. ಅವುಗಳಲ್ಲಿ ಒಂದು

**ವಿದ್ಯಾವಂತನ ಮುಖವು ।**
**ಮುದ್ದು ಬರುವಂತಿಕ್ಕುಟ**
**ವಿದ್ಯೆಯಿಲ್ಲದವನ ಬರಿ ಮುಖವು ।**
**ಹಾಳೂರ ಹದ್ದಿನಂತಿಕ್ಕು ಸರ್ವಜ್ಞ।**

ಈ ವಚನದ ಅರ್ಥ ವಿದ್ಯಾವಂತನ ಮುಖವು ಎಲ್ಲರೂ ಮುದ್ದಿಸುವಂತಿರುತ್ತದೆ. ಆದರೆ ವಿದ್ಯಾಹೀನನ ಬರಿ ಮುಖವು ಹಾಳೂರಿನೊಳಗಿರುವ ಹದ್ದಿನಂತಿರುತ್ತದೆ ಎಂಬುದಾಗಿದೆ.

ಸರ್ವಜ್ಞಕವಿ ತನ್ನ ಇನ್ನೊಂದು ವಚನದಲ್ಲಿ

**ವಿದ್ಯಕ್ಕೆ ಕಡೆಯಿಲ್ಲ।**<br>
**ಬುದ್ಧಿಗೆ ಬೆಲೆಯಿಲ್ಲ।**<br>
**ಛಿದ್ರಿಸುವವಗೆ ಗತಿಯಿಲ್ಲ**<br>
**ಮರಣಕ್ಕೆ ಮದ್ದುಗಳಿಲ್ಲ ಸರ್ವಜ್ಞ॥**

ಎಂದಿದ್ದಾರೆ. ಇದರರ್ಥ ವಿದ್ಯೆಗೆ ಕೊನೆ ಎಂಬುದೇ ಇಲ್ಲ, ಅದು ಅನಂತವಾದದ್ದು,ಅದರಂತೆ ಬುದ್ಧಿಯೂ ಅಮೂಲ್ಯವಾದುದು. ಇದಕ್ಕೆ ಬೆಲೆ ಕಟ್ಟಲಾಗದು. ಚಾಡಿಕೋರನಿಗೆ ಗತಿಯಿಲ್ಲ, ಮರಣಕ್ಕೆ ಯಾವ ಔಷಧಿಯೂ ಇಲ್ಲ ಎಂಬುದಾಗಿದೆ.

ತನ್ನ ಇನ್ನೊಂದು ವಚನದಲ್ಲಿ ವಿದ್ಯೆಯ ಕುರಿತು ತಿಳಿಸುತ್ತ ಸರ್ವಜ್ಞಕವಿ

ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರು<br>
ಬಿದ್ದಿರಲು ಬಂದು ನೋಡದ ತಾಯಿ ಶುದ್ಧ ವೈರಿಗಳು ಸರ್ವಜ್ಞ

ಎನ್ನುತ್ತಾರೆ. ಅಂದರೆ ತಂದೆಯಾದವನು ತನ್ನ ಮಕ್ಕಳಿಗೆ ವಿದ್ಯೆ ನೀಡುವುದು ಅತ್ಯವಶ್ಯಕ ಎಂದು ಈ ಮೂಲಕ ಸರ್ವಜ್ಞ ಕವಿ ತಿಳಿಸುತ್ತಾರೆ.

ವಿದ್ಯೆಯ ಮಹತ್ವವನ್ನು ತಿಳಿಸುವ ಮತ್ತೊಂದು ಪ್ರಸಿದ್ಧ ಶ್ಲೋಕವೆಂದರೆ

**'ಸ್ವಗೃಹೇ ಪೂಜ್ಯತೇ ಮೂರ್ಖಂ**<br>
**ಸ್ವಗ್ರಾಮೆ ಪೂಜ್ಯತೇ ಪ್ರಭುಃ**<br>
**ಸ್ವದೇಶೇ ಪೂಜ್ಯತೇ ರಾಜ**<br>
**ವಿದ್ವಾನ್ ಸರ್ವತ್ರ ಪೂಜ್ಯತೇ'**

ಮೂರ್ಖನು ತನ್ನ ಮನೆಯಲ್ಲಿ ಪೂಜಿಸಲ್ಪಡುತ್ತಾನೆ. ಗ್ರಾಮಾಧಿಕಾರಿಯು ತನ್ನ ಗ್ರಾಮದಲ್ಲಿ ಪೂಜಿಸಲ್ಪಡುತ್ತಾನೆ. ರಾಜನು ತನ್ನ ದೇಶದಲ್ಲಿ ಪೂಜಿಸಲ್ಪಟ್ಟರೆ ವಿದ್ಯಾವಂತನು ಎಲ್ಲೆಡೆಯಲ್ಲಿಯೂ ಗೌರವವನ್ನು ಹೊಂದುತ್ತಾನೆ ಎಂಬುದು ನಿಜಕ್ಕೂ ವಿದ್ಯೆಯ ಮಹತ್ವಕ್ಕೆ ಹಿಡಿದ ಕನ್ನಡಿ ಯಾಗಿದೆ.

ಸಂಸ್ಕೃತದ ಶ್ಲೋಕವೊಂದು

'ನ ಚ ವಿದ್ಯಾ ಸಮೋ ಬಂಧುಃ<br>
ನ ಚ ವ್ಯಾಧಿ ಸಮೋರಿಪುಃ'

ಎನ್ನುತ್ತದೆ. ಅಂದರೆ ವಿದ್ಯೆಗೆ ಸಮನಾದ ಬಂಧುವಿಲ್ಲ ಮತ್ತು ರೋಗಕ್ಕೆ ಸಮನಾದ ಶತೃವಿಲ್ಲ ಎಂದರ್ಥ. ಆ ಮೂಲಕ ವಿದ್ಯೆಗೆ ಮನುಷ್ಯನ ಜೀವನದಲ್ಲಿ ಅತಿ ಮಹತ್ವದ ಸ್ಥಾನ ನೀಡಲಾಗಿದೆ. ಸದ್ವಿದ್ಯೆಯು ಮಾನವನಲ್ಲಿ ಸನ್ನಡವಳಿಕೆಗಳನ್ನುಂಟು ಮಾಡುತ್ತದೆ. ಆ ಮೂಲಕ ವ್ಯಕ್ತಿ ಸಮಾಜಕ್ಕೆ ಕಂಟಕಪ್ರಾಯನಾಗದೆ ಪರೋಪಕಾರಿಯಾಗಿ ರೂಪುಗೊಳ್ಳುತ್ತಾನೆ.

ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್ ।<br>
ಪಾತ್ರತ್ವಾತ್ ಧನಮಾಪ್ನೋತಿ ಧನಾದ್ಧರ್ಮಂ ತತಸ್ಸುಖಮ್ ॥

ವಿದ್ಯೆಯಿಂದ ವಿನಯ ಉಂಟಾಗುತ್ತದೆ. ವಿನಯದಿಂದ ವ್ಯಕ್ತಿಯು ಸಮಾಜದಲ್ಲಿ ಉನ್ನತ ಸ್ಥಾನ ಪಡೆಯುತ್ತಾನೆ. ಇದರಿಂದ ಧನ ಸಂಪಾದನೆಯಾಗುತ್ತದೆ. ಧನದಿಂದ ವ್ಯಕ್ತಿ ಧರ್ಮಾಚರಣೆ ಮಾಡಲು ಇಹಪರಗಳಲ್ಲಿ ಸೌಖ್ಯ ಉಂಟಾಗುತ್ತದೆ.



ಆದ್ದರಿಂದ ಇಡೀ ಮಾನವ ಕುಲಕ್ಕೆ ಕಲ್ಯಾಣಕಾರಿಯಾದ ಅಳಿಯದ ಸಂಪತ್ತಾದ ವಿದ್ಯೆಯನ್ನು ಪಡೆಯಲು ನಾವೆಲ್ಲರೂ ಶ್ರಮವಹಿಸಬೇಕು. ವಿದ್ಯೆಯನ್ನು ತಪಸ್ಸಿಗೆ ಹೋಲಿಸಲಾಗುತ್ತದೆ. ವಿದ್ಯೆ ಪಡೆವಾಗ ಎದುರಾಗುವ ಎಲ್ಲ ಅಡೆತಡೆ ಗಳನ್ನು ನಿವಾರಿಸಿಕೊಂಡು ಶ್ರಮವಹಿಸಿ ವಿದ್ಯೆಗಳಿಸುವುರಿಂದ ಅಜ್ಞಾನದ ಅಂಧಕಾರ ತೊಲಗಿ ನಮ್ಮಲ್ಲಿ ಅರಿವಿನ ಬೆಳಕು ಮೂಡುತ್ತದೆ. ನಾವೆಲ್ಲರೂ ಈ ಬೆಳಕಿನ ಮಾರ್ಗದ ಕಡೆಗೆ ಸಾಗಲು ಪ್ರಯತ್ನಶೀಲರಾಗೋಣ.

**ಎಸ್.ಎಲ್. ವರಲಕ್ಷ್ಮೀ ಮಂಜುನಾಥ್**<br>
**ನಂಜನಗೂಡು**

# ವಿವಾಹ



ಸಂಘದ ಸದಸ್ಯರು ಶ್ರೀ ಬಿ.ಇ. ಗೋವಿಂದ್ ಮತ್ತು ಶ್ರೀಮತಿ ಹೆಚ್.ಕೆ. ಜಯಶ್ರೀ ಅವರ ಪುತ್ರ ಚಿ|| ಜಿ. ಶ್ರೀಹರಿ ಅವರ ವಿವಾಹ ಮಹೋತ್ಸವವು ಶ್ರೀಮತಿ ಟಿ.ಕೆ. ಸುರಭಿ ಮತ್ತು ಶ್ರೀ ಎನ್.ಎಲ್. ಅನಂತಪದ್ಮನಾಭ ಅವರ ಪುತ್ರಿ ಚಿ|| ಡಾ|| ಎ. ಲಕ್ಷ್ಮಿ ಅವರೊಡನೆ ದಿನಾಂಕ 27–09–2023 ರಂದು ಬೆಂಗಳೂರಿನಲ್ಲಿ ನೆರವೇರಿತು.

ಶ್ರೀ ಗೋವಿಂದ್‌ರವರು ಸಂಘದ ಅನ್ನ ಸಂತರ್ಪಣಾ ನಿಧಿಗೆ 3000/– ರೂ. ಗಳ ದೇಣಿಗೆ ನೀಡುವ ಮೂಲಕ ಈ ಮಂಗಳಕರ ಸಂದರ್ಭದ ಸಂತಸವನ್ನು ಸಂಘದೊಂದಿಗೆ ಹಂಚಿಕೊಂಡಿದ್ದಾರೆ.

***



ಸಂಘದ ಪೋಷಕರು ಶ್ರೀ ಬಿ.ಎನ್. ಗೋವಿಂದ ಪ್ರಸಾದ್ ಮತ್ತು ಶ್ರೀಮತಿ ಬಿ.ಜಿ. ಇಂದಿರಾ ಪ್ರಸಾದ್ ಅವರ ಪುತ್ರ ಚಿ|| ಬಿ.ಜಿ. ಶಿಶಿರ್ ನಾರಾಯಣ್ ಅವರ ವಿವಾಹ ಮಹೋತ್ಸವವು ಶ್ರೀಮತಿ ಉಷಾರಾಣಿ ಮತ್ತು ಶ್ರೀ ಹೆಚ್.ವಿ. ಮುರಳಿ ಅವರ ಪುತ್ರಿ ಚಿ|| ಹೆಚ್. ಎಂ. ಶ್ರಾವ್ಯ ಅವರೊಡನೆ ದಿನಾಂಕ 19–10–2023 ರಂದು ಬೆಂಗಳೂರಿನಲ್ಲಿ ನೆರವೇರಿತು.

***



ಸಂಘದ ಸದಸ್ಯರು ಶ್ರೀ ಕೆ.ಸಿ. ಜಯರಾಮ್ ಮತ್ತು ದಿವಂಗತ ನಳಿನಿ ಜಯರಾಮ್ ಅವರ ಪುತ್ರ ಚಿ|| ಅರುಣ್ ಜೆ ಕಾರ್ತಿಕ್ ಅವರ ವಿವಾಹ ಮಹೋತ್ಸವವು ಶ್ರೀಮತಿ ಶಾಂತಲಾ ಸತೀಶ್ ಮತ್ತು ಶ್ರೀ ಎ.ಎನ್. ಸತೀಶ್ ಅವರ ಪುತ್ರಿ ಚಿ|| ಸ್ಫೂರ್ತಿ ಸತೀಶ್ ಅವರೊಡನೆ ದಿನಾಂಕ 7–12–2023 ರಂದು ಬೆಂಗಳೂರಿನಲ್ಲಿ ಜರುಗಿತು.

***



ಸಂಘದ ಸದಸ್ಯರು ಶ್ರೀ ಅಶ್ವತ್ಥರಾಜಾರಾವ್ ಮತ್ತು ಶ್ರೀಮತಿಯವರ ಅವರ ಪುತ್ರ ಚಿ|| ವಿಷ್ಣು ಅವರ ವಿವಾಹಮಹೋತ್ಸವವು ಶ್ರೀಮತಿ ಮತ್ತು ಶ್ರೀ ಎಚ್.ಕೆ. ಶ್ರೀನಿವಾಸ್ ಅವರ ಪುತ್ರಿ ಚಿ|| ಅಕ್ಷತಾ ಅವರೊಂದಿಗೆ ಬೆಂಗಳೂರಿನಲ್ಲಿ ದಿನಾಂಕ 15–12–2023 ರಂದು ನೆರವೇರಿತು. ಶ್ರೀಯುತ ಅಶ್ವತ್ಥರಾಜಾರಾವ್ ಅವರು ಸಂಘದ ಕಾರ್ಯಚಟುವಟಿಕೆಗಳಿಗೆ 2000/– ರೂ. ಗಳ ದೇಣಿಗೆ ನೀಡುವ ಮೂಲಕ ಈ ಮಂಗಳಕರ ಸಂದರ್ಭದ ಸಂತಸವನ್ನು ಸಂಘದೊಂದಿಗೆ ಹಂಚಿಕೊಂಡಿದ್ದಾರೆ.

***



ಸಂಘದ ಸದಸ್ಯರು ಶ್ರೀಮತಿ ಶೋಭಾ ಕುಲಕರ್ಣಿ ಮತ್ತು ಶ್ರೀ ಎಸ್.ಆರ್. ಕುಲಕರ್ಣಿ ಅವರ ಪುತ್ರಿ ಚಿ|| ಶ್ವೇತಾ ಅವರ ವಿವಾಹ ಮಹೋತ್ಸವವು ಶ್ರೀಮತಿ ಮಾಯಾ ಶಶಿಧರ್ ಮತ್ತು ಶ್ರೀ ಎಸ್.ಜಿ. ಶಶಿಧರ್ ಅವರ ಪುತ್ರ ಚಿ|| ಶರಣ್ ಅವರೊಡನೆ ದಿನಾಂಕ 29–12–2023 ರಂದು ಬೆಂಗಳೂರಿನಲ್ಲಿ ನೆರವೇರಿತು.

***



ಸಂಘದ ಪೋಷಕ ಶ್ರೀ ಎ. ಈಶ್ವರನ್ ರವರ ಸಹೋದರ ದಿವಂಗತ ಎ. ನಾಗರಾಜನ್ ಮತ್ತು ಶ್ರೀಮತಿ ಸುಮಾ ಅವರ ಪುತ್ರ ಚಿ|| ಎನ್. ಸುಹಾಸ್ ಅವರ ವಿವಾಹ ಮಹೋತ್ಸವವು ಶ್ರೀಮತಿ ಎನ್.ವಿ. ಬೃಂದಾ ಮತ್ತು ಶ್ರೀ ಜಿ. ಶಶಿರಾಜ್ ಅವರ ಪುತ್ರಿ ಚಿ|| ಡಾ|| ಎಸ್. ಸಂಜನಾ ಅವರೊಡನೆ ದಿನಾಂಕ 29–12–2023 ರಂದು ಮೈಸೂರಿನಲ್ಲಿ ನೆರವೇರಿತು.

ಸಂಘವು ಎಲ್ಲ ನವದಂಪತಿಗಳಿಗೆ ಶುಭಕೋರುತ್ತಾ ದೀರ್ಘಕಾಲದ ಸಂತಸಕರ ದಾಂಪತ್ಯವನ್ನು ಹಾರೈಸುತ್ತದೆ.

# ಒಂದು ದಿನದ ಪ್ರವಾಸ – 10.12.2023



ಪ್ರವಾಸದಲ್ಲಿ ಪಾಲ್ಗೊಂಡ ಸದಸ್ಯರು, ಹಿತೈಷಿಗಳು, ಮತ್ತು ಅವರ ಪರಿವಾರವರ್ಗ

# ಪ್ರವಾಸದ ಚಿತ್ರಗಳು









ಸಂಘದ ಸದಸ್ಯರು ರಂಗಸ್ಥಳದ ಶ್ರೀ ರಂಗನಾಥನ ಸನ್ನಿಧಿಯಲ್ಲಿ ಕಾರ್ತೀಕ ಮಾಸದ ಪ್ರಯುಕ್ತ ದೀಪೋತ್ಸವವನ್ನು ಆಚರಿಸಿ ಕೃತಾರ್ಥರಾದರು

## ಕ್ಯಾಲೆಂಡರ್ ಬಿಡುಗಡೆ – 10.12.2023





## ಭೋಜನ ಸಮಯ













# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ



ಆರ್.ಎಸ್. ಗುರುಪ್ರಸಾದ್ ಕುಟುಂಬ



ಕಾಶಿ ವಿಶ್ವನಾಥ ದೇವಾಲಯ, ದೊಮ್ಮಸಂದ್ರ



ಆರ್. ನಾಗರತ್ನ ಮತ್ತು ಕುಟುಂಬ



ಎಸ್.ಆರ್. ಲತಾ



ರಾಜೇಶ್ವರಿ ವೇಣುಗೋಪಾಲ್



ನಂದಿನಿ ಪ್ರದೀಪ್ ಕುಮಾರ್ ಕುಟುಂಬ

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ



ಜಾನಕಿರಾಮ್ ಕುಟುಂಬ



ಜಿ.ಎಸ್. ಸೂರ್ಯನಾರಾಯಣ



ಆರ್.ಎ. ಶ್ರೀಕಾಂತ್



ಆರ್.ಎ. ಶ್ಯಾಮಸುಂದರ್



ಆರ್.ಎಸ್. ಪ್ರಶಾಂತ್



ಆರ್. ಎ. ಪೂರ್ಣಿಮಾ

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ



ಆರ್.ಪಿ. ಮೋಹನ್



ವಿ. ಸುನಿಲ್



ಉಮಾ ಗೋವಿಂದ್



ಎ.ಕೆ. ವಿಶ್ವನಾಥ್ ಕುಟುಂಬ



ಎನ್. ನಾಗರಾಜ್ ಕುಟುಂಬ



ಎಸ್. ಕೃಷ್ಣ

# ನಮ್ಮವರ ಮನೆಗಳಲ್ಲಿ ದಸರಾ ಬೊಂಬೆಗಳ ಹಬ್ಬ



ವಸುಮತಿ ರವಿಕುಮಾರ್ ಕುಟುಂಬ



ನಾಗರಾಜ್ ಸುಬ್ಬರಾವ್



ಪದ್ಮನಾಭನ್, ಸರ್ಜಾಪುರ



ನಾಗಲಕ್ಷ್ಮಿ ನಾಗರಾಜ್



ಟಿ.ಎನ್. ಭಾನುಮತಿ

ಎಲ್ಲಿದೆ?

## ಪಾರ್ಶ್ಯಾಲಂನ (ಪರ್ಲಿಯ) ವೈದ್ಯನಾಥ

ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿರುವ ಚಿಕ್ಕಗ್ರಾಮ ಪರ್ಲಿ. ಮಹಾಭಾರತದ ಪ್ರಸಿದ್ಧ ಕುಂತೀಪುರವೇ ಇದು ಎಂದು ನಂಬಿಕೆ. ಅಮೃತ ಮಥನದ ಸಂದರ್ಭದಲ್ಲಿ ಸೃಷ್ಟಿಯಾದ ಹದಿನಾಲ್ಕು ರತ್ನಗಳಲ್ಲಿ ಈ ಲಿಂಗವೂ ಒಂದು ಎಂಬುದು ಪ್ರತೀತಿ. ರಾವಣಾಸುರನು ಪರಮಶಿವನನ್ನು ಒಲಿಸಿಕೊಳ್ಳಲು ಇಲ್ಲಿ ತಪಸ್ಸು ಮಾಡಿ ತನ್ನ ಶಿರವನ್ನೇ ಅರ್ಪಿಸಿದನಂತೆ.

ಕ್ರಿ. ಶ. 1706ರಲ್ಲಿ ರಾಣಿ ಅಹಲ್ಯಾದೇವಿ ಹೋಳ್ಕರ್‌ರವರು ಈ ಅಪೂರ್ವ ಲಿಂಗವನ್ನು ಪತ್ತೆ ಮಾಡಿದರು. ನಂತರ ಪೇಶ್ವೆ ನಾನಾರಾವ್ ದೇಶಪಾಂಡೆರವರು ಇಲ್ಲಿ ಭವ್ಯವಾದ ದೇವಸ್ಥಾನವನ್ನು ಕಟ್ಟಿಸಿದರು.

**ದೇವಾಲಯದ ಸ್ವರೂಪ, ಭೇಟಿ ನೀಡುವ ಸಮಯ :**

ಬೆಟ್ಟದ ಮೇಲಿರುವ ವೈದ್ಯನಾಥ ದೇವಸ್ಥಾನದಲ್ಲಿ ಶಿವಲಿಂಗ 11 ಅಂಗುಲ ಎತ್ತರವಿದ್ದು, ಮೇಲೆ ಉಂಗುಷ್ಟಾಕಾರದ ಗುಳಿ ಇದೆ. ಇದು ರಾವಣನ ಉಂಗುಷ್ಠದ ಗುರುತು ಎನ್ನಲಾಗುತ್ತದೆ. ಹತ್ತಿರದಲ್ಲೇ ರಾಮ ರಾಜೇಶ್ವರ ಮಹದೇವ ದೇವಸ್ಥಾನವೂ ಇದೆ. ಪರ್ಲಿ ಶೈವ ಕ್ಷೇತ್ರವಾದಂತೆ, ವೈಷ್ಣವ ಕ್ಷೇತ್ರವೂ ಹೌದು. ಇಲ್ಲಿ ಹರಿಹರ ತೀರ್ಥವಿದೆ. ಭಕ್ತ ಮಾರ್ಕಂಡೇಯ ಇಲ್ಲಿ ತಪಸ್ಸು ಮಾಡಿದನೆಂಬ ಕತೆ ಇರುವಂತೆ, ಪ್ರಸಿದ್ಧವಾದ ಸತ್ಯವಾನ್–ಸಾವಿತ್ರಿಯರ ಕತೆ ಕೂಡ ಇಲ್ಲಿಯೇ ನಡೆದದ್ದು ಎಂದು ನಂಬಲಾಗಿದೆ. ಹತ್ತಿರದ ನಾರಾಯಣ ಪರ್ವತದಲ್ಲಿ ಸಾವಿತ್ರಿ ನೆಟ್ಟಿದ್ದು ಎಂದು ನಂಬಲಾದ ವಟವೃಕ್ಷವೂ ಇದೆ. ಇಲ್ಲಿ ವಿಶಿಷ್ಟವಾದ ಗಣಪತಿ ವಿಗ್ರಹವಿದೆ. ವೈದ್ಯನಾಥ ಲಿಂಗಕ್ಕೆ ಪ್ರತಿ ಸೋಮವಾರ ವಿಶೇಷ ಪೂಜೆ ನಡೆಯುತ್ತದೆ. ಚೈತ್ರ ಪಾಡ್ಯ (ಯುಗಾದಿ), ವಿಜಯದಶಮಿ, ತೃಪ್ತಿ ಪೂರ್ಣಿಮಾ (ಭಾರತ ಹುಣ್ಣಿಮೆ), ಮಹಾ ಶಿವರಾತ್ರಿಗಳಂದು ವಿಶೇಷ ಪೂಜೆಗಳಿರುತ್ತವೆ. ಈ ಶಿವಲಿಂಗಕ್ಕೆ ಬಿಲ್ವಪತ್ರದಂತೆ, ತುಳಸೀ ಕೂಡ ಪವಿತ್ರವಾಗಿರುವುದೊಂದು ವಿಶೇಷ.

**ಸೇರುವ ಮಾರ್ಗ :**

ಮುಂಬೈಯಿಂದ 512 ಕಿ. ಮೀ. ಔರಂಗಾಬಾದ್ ಮಾರ್ಗವಾಗಿ ಪರ್ಲಿ ವೈಜನಾಥ ರೈಲು ನಿಲ್ದಾಣಕ್ಕೆ ಬರಬೇಕು. ಅಲ್ಲಿಂದ 2 ಕಿ. ಮೀ. ರಸ್ತೆ ಮಾರ್ಗ. ವಾಹನ ಸೌಕರ್ಯ ಇದೆ. ಹೆಚ್ಚಿನ ಭಕ್ತರು ನಡೆದೇ ಈ ಮಾರ್ಗ ಕ್ರಮಿಸುತ್ತಾರೆ.

**ವಸತಿ :**

ದೇವಸ್ಥಾನದ ಅಧಿಕೃತ ವಸತಿಗೃಹ ಮಾತ್ರ ಇಲ್ಲಿ ಇರುವ ವ್ಯವಸ್ಥೆ. ಪರ್ಲಿ ನಿಲ್ದಾಣದಲ್ಲಿ ಹೋಟೆಲುಗಳಿವೆ. ಹತ್ತಿರದ ನಂದೇಡಿನಲ್ಲೂ ಉಳಿದುಕೊಳ್ಳಬಹುದು.



**ಅನಿಲ್ ರಮೇಶ್**
**9980027189**

********************************************************************************************

## ಮಾತು ಮತ್ತು ಮೌನ

'ವಾಕ್ ಮತ್ತು ಅರ್ಥ' ಪಾರ್ವತಿ ಪರಮೇಶ್ವರರಂತೆ ಅನ್ಯೋನ್ಯವೆಂದ ಕಾಳಿದಾಸ. ಮಾತು ಮತ್ತು ಮೌನ ಕೂಡ ಅನ್ಯೋನ್ಯ. ಒಂದು ಊಟ ಮತ್ತೊಂದು ಉಪವಾಸ. ಎಲ್ಲಾ ಭಾವನೆಗಳನ್ನು ಮಾತಿನಿಂದ ಮಾತ್ರ ಸಂವಹನ ಮಾಡಲು ಸಾಧ್ಯವೇ? ಕೆಲವು ಸಲ ನಮ್ಮ ಭಾವನೆಗಳನ್ನು ಸಂವಹನ ಮಾಡಲು ಮೌನವೇ ಯೋಗ್ಯ.

ಮಾತನಾಡುವಾಗ ಎರಡು ತುಟಿಗಳು ಸ್ಪಂದಿಸುತ್ತದೆ, ತಾಳ ಹಾಕುತ್ತವೆ. ಮೌನದಲ್ಲಿ ತುಟಿಗಳು ಗಂಟು ಬಿಚ್ಚುವುದಿಲ್ಲ. ಹೊಲಿಗೆ ಬಿದ್ದಿರುತ್ತದೆ. ಎಷ್ಟೋ ಸಲ ಮಾತಿಗಿಂತ ಮೌನವೇ ಹಿತಕರ ಎನಿಸಲೂ ಬಹುದು.

ಮಾತು, ಮೌನಗಳ ನಡುವೆ ಜಗಳವಾದಾಗ ಮೌನ ಗೆಲ್ಲುತ್ತದೆ. ಗೆಲುವನ್ನು ಸುಂದರ ಶಬ್ದಗಳಲ್ಲಿ ಪೋಣಿಸಿ ಹೊಗಳುತ್ತದೆ. ಮೌನ ಗೆದ್ದಾಗ ಹೃದಯ ತುಂಬುತ್ತದೆ. ಕಣ್ಣುಗಳು ಅರಳುತ್ತವೆ. ಮಾತಿಗಿಂತ ಮೌನವೇ ಹಿತಕರ ಎನ್ನಿಸುವ ಪ್ರಸಂಗಗಳೂ ಉಂಟು. ಶಬ್ದದಿಂದ ಮಾತು ನಿಶಬ್ದವಾಗದೆ ಮೂಕವಾಗದೆ ಮೌನ ಮಾತು ಮುತ್ತುಗಳನ್ನು ಪೋಣಿಸಿದಂತೆ ಹೊಳೆಯುತ್ತದೆ. ಅದರ ಪ್ರಭೆಯೇ ಭಿನ್ನ. ಮಾತು ಪ್ರಶ್ನೆಯಾದರೆ ಮೌನ ಉತ್ತರ. ಸಂಶಯಗಳು ಭಿನ್ನ.



**ಎಸ್. ಶ್ರೀನಿವಾಸಯ್ಯ**
**7899318098**

# ದೇಹ ದಾನ, ಮಹಾ ದಾನ

ಈಚಿನ ದಿನಗಳಲ್ಲಿ ಬಹಳಷ್ಟು ಜನ ದೇಹದ ಬಿಡಿ ಭಾಗಗಳನ್ನು ಅಪೇಕ್ಷಿಸಿ ವಿವಿಧ ಆಸ್ಪತ್ರೆಗಳಲ್ಲಿ ನೊಂದಾಯಿಸಿ ಅವರಿಗೆ ಅನುಕೂಲವಾಗುವಂಥಹ ಬಿಡಿ ಭಾಗಗಳನ್ನು ಅಳವಡಿಸಿಕೊಳ್ಳಲು ಕಾಯುತ್ತಿರುವ ಸಂಗತಿಗಳನ್ನು ನಾವೆಲ್ಲರೂ ಆಗಿಂದಾಗ್ಗೆ ದಿನ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ.

ಈ ಹಿನ್ನೆಲೆಯಲ್ಲಿ ನಾನು "ಅಂಗಗಳ ದಾನ" ಎಂಬ ಪುಸ್ತಕವನ್ನು ಓದಿದೆ. ಆ ಪ್ರಯತ್ನಕ್ಕೆ ನಾವುಗಳೆಲ್ಲರೂ ಒಮ್ಮೆ ಚಿಂತಿಸಿ ಒಪ್ಪಿಗೆ ನೀಡಿದ್ದೇ ಆದರೆ ಅನೇಕ ನಾಗರೀಕರ ಬದುಕಿನಲ್ಲಿ ನಮ್ಮ ಈ ದಾನ ಅರ್ಥಪೂರ್ಣವಾಗುತ್ತದೆ ಅಂತೆಯೇ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ನಂಬಿರುತ್ತೇನೆ.

ಈ ವಿಷಯವನ್ನು ನಾನು ಮತ್ತು ನನ್ನ ಸಹಧರ್ಮಿಣಿಯೂ ಆಲೋಚಿಸಿ ಎಂ.ಎಸ್. ರಾಮಯ್ಯ ಆಸ್ಪತ್ರೆಯವರು ಈಗಾಗಲೇ ಆರಂಭಿಸಿರುವ "ಸಂಕಲ್ಪ" ಯೋಜನೆಯಲ್ಲಿ ನಮ್ಮಗಳ ಹೆಸರನ್ನು ನೊಂದಾಯಿಸಿಕೊಂಡಿದ್ದೆವು. ನಮ್ಮ ಜೀವನ ಅಂತ್ಯವಾದಾಗ ನಮ್ಮಗಳ ಕಣ್ಣು ಅಂತೆಯೇ ದೇಹದ ಉಳಿದೆಲ್ಲಾ ಭಾಗಗಳನ್ನು ಅಗತ್ಯವಿರುವ ವ್ಯಕ್ತಿಗಳಿಗೆ ಅಳವಡಿಸಲು ದೇಹದಾನ ಮಾಡುವ ಕ್ರಿಯೆಗಳಿಗೆ ಒಪ್ಪಿಗೆ ನೀಡಿದ್ದೆವು.

ಈ ಹಿನ್ನಲೆಯಲ್ಲಿ ದಿನಾಂಕ 19.9.2022 ನನ್ನ ಪತ್ನಿ ಸಿ. ಶಾಂತಾ ತೀರಿಕೊಂಡ ನಂತರ ಆಕೆಯ ಕಣ್ಣುಗಳನ್ನು ನಾರಾಯಣ ನೇತ್ರಾಲಯಕ್ಕೆ ಮತ್ತು ಆಕೆಯ ದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸೇರಿದ ಅನಾಟಮಿ ವಿಭಾಗಕ್ಕೆ ನೀಡಿದೆವು.

(ಆ ವಿಭಾಗದವರು ನೀಡಿದ ರಸೀತಿ ಮತ್ತು ವೈದ್ಯರು ನೀಡಿದ ಪ್ರಮಾಣ ಪತ್ರವು ಸಂಬಂಧಿಸಿದ ನಗರ ಪಾಲಿಕೆ ಕಛೇರಿಗೆ ನೀಡಿ ಮರಣ ಪ್ರಮಾಣ ಪತ್ರವನ್ನು ಪಡೆಯಲು ನೆರವಾದವು.)

ಈ ವಿಷಯದಲ್ಲಿ ನಿಮ್ಮಗಳೆಲ್ಲರ ಗಮನಕ್ಕೆ ತರುವ ವಿಷಯವೇನೆಂದರೆ ಯಾವುದೇ ವ್ಯಕ್ತಿ ತನ್ನ ನಿಧನದ ನಂತರ ತನ್ನ ದೇಹವನ್ನು ದಾನವಾಗಿ ನೀಡಲು ಎಂ.ಎಸ್. ರಾಮಯ್ಯ ಶಿಕ್ಷಣಸಂಸ್ಥೆ ಮತ್ತು ಆಸ್ಪತ್ರೆಯು ರೂಪಿಸಿರುವ ಯೋಜನೆಯಲ್ಲಿ ನೊಂದಾಯಿಸಿಕೊಂಡಲ್ಲಿ ಅಂತಹ ವ್ಯಕ್ತಿ ಆಕಸ್ಮಿಕವಾಗಿ ಅನಾರೋಗ್ಯದ ಕಾರಣ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡರೆ ಅಂತಹ ವ್ಯಕ್ತಿಗೆ ಶೇಕಡ ಐವತ್ತರಂತೆ ಚಿಕಿತ್ಸೆ ದರಗಳಲ್ಲಿ ರಿಯಾಯಿತಿ ಪಡೆಯಲು ಅವಕಾಶವಿರುತ್ತದೆ. ಆದಕಾರಣ ಯೋಜನೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಆಸಕ್ತಿ ಇರುವ ಕುಟುಂಬಗಳು ಈ ದಿಶೆಯಲ್ಲಿ ಯೋಚಿಸಿ ಸೂಕ್ತ ಕ್ರಮಕ್ಕೆ ಮುಂದಾಗಲು ಅಂತೆಯೇ ಅವರುಗಳ ಜೀವನಯಾತ್ರೆ ಮುಗಿದಮೇಲೆ ತಮ್ಮ ಪ್ರಾರ್ಥಿವ ಶರೀರವನ್ನು ಈ ರೀತಿ ವಿನಿಯೋಗವಾಗಲೆಂದು ಸಂಕಲ್ಪಿಸಿ ಸಾರ್ಥಕತೆಗೆ ಮುಂದಾಗುತ್ತಾರೆಂದು ಆಶಿಸುತ್ತೇನೆ. ಈ ಬಗ್ಗೆ ಭಗವಂತನು ಎಲ್ಲರಿಗೂ ಸದ್ಬುದ್ಧಿ ಕರುಣಿಸಿ ಸರ್ವದಾ ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ.



**ಎಸ್. ಚಂಪಕಧಾಮ**
**9019021347**

---

# ಒಂದು ದಿನದ ಪ್ರವಾಸದಲ್ಲಿ ಪಾಲ್ಗೊಂಡವರ ಅನಿಸಿಕೆಗಳು

Thank you all for making us comfortable and enjoy the trip. You have taken care of every small need of us. Right from the place selection to covering travel and food arrangements to pooja to washroom facility, the planning was good. I came to the trip for the first time. You are all professionals in arrangements and in hospitality. I was able to meet many of our people and mix with them.

Kudos to all of you. May God bless you all. Thank you once again.

Dr. C. Nagaraj - 93439 79903

---

It was a wonderful day and we enjoyed each moment of the trip. Totally a text book launch. Thanks to all committee members & the volunteers

RS Guruprasad - 94458 69491

19>>

<< 18

Our heartfelt thankfulness to the entire Committee Members on superlative arrangements for the One-day Trip. Had superb darshan at both the temples . Attention to details was exceptional. We also thank the participants for their wholehearted cooperation.

RS Ramesh - 94458 66383

---

Reached home safe, sound and contented. I thank the committee Members & volunteers for this memorable outing.

S Umesh - 98451 62318

---

Thanks to the committee members for this excellent, religious trip. It was a great day. Each and every need of the members was considered and arranged. Organising an outing for this large size of people is not an easy task. A lot of planning and execution is required. It was seen in this trip.

This was our first trip n wish to be a part of the upcoming trips. Not only as a member but as volunteer for any kind of assistance. This way, we can also learn how to plan n organise.

Once again thank you to the committee members and our community members for making this trip a grand success

Aparna Ravi - 98450 51027

---

ಒಂದು ದಿನದ ಪ್ರವಾಸ ಬಹಳ ಸೊಗಸಾಗಿತ್ತು ಬಹಳ ಕಾಲದ ನಂತರ ನಡೆದದ್ದರಿಂದ ತುಂಬಾ ಉಲ್ಲಾಸ ಮತ್ತು ಉತ್ಸಾಹದಿಂದ ಕೂಡಿತ್ತು. ಪ್ರತಿಯೊಂದೂ ವಿವರನ್ನೂ ಕಾಳಜಿಯಿಂದ ನಿರ್ವಹಿಸಿದ ರೀತಿ ಎದ್ದು ಕಾಣುತ್ತಿತ್ತು. ಎಲ್ಲರ ಆಲೋಚನೆ, ಚಿಂತನೆಗಳನ್ನು ಒಗ್ಗೂಡಿಸಿದ ಅಚ್ಚುಕಟ್ಟಾದ ಪ್ರವಾಸ ಇದಾಗಿತ್ತು.

ಊಟ, ತಿಂಡಿ, ಕೋಡುಬಳೆ, ಕಿತ್ತಳೆ ಎಲ್ಲದಕ್ಕೂ ನನ್ನ ಹೃತ್ಪೂರ್ವಕ ಧನ್ಯವಾದಗಳು

ಕೆ.ಆರ್. ರಮಾ ದೇವಿ – 99861 81525

---

All arrangements were Super. Me & My Friends Enjoyed the Trip. My friends have also expressed their sincere thanks.

Thank you all for your excellent work.

Tara Raveendra - 78929 54619

---

ತುಂಬಾ ಚೆನ್ನಾಗಿತ್ತು. ದೇವರ ದರ್ಶನ ಹಾಗೂ ಉತ್ಸವಗಳು ತುಂಬಾ ಚೆನ್ನಾಗಿದ್ದವು. ನಿಮ್ಮ ದಯದಿಂದ ಇಡೀ ದಿನ ದೇವರ ದರ್ಶನದಲ್ಲಿ ಬೇರೆ ಯಾವ ಯೋಚನೆಗಳು ಬರದೇ ತುಂಬಾ ಚೆನ್ನಾಗಿತ್ತು. ತುಂಬಾ ಚೆನ್ನಾಗಿ organize ಮಾಡಿದಿರಿ. ಎಲ್ಲರಿಗೂ ತುಂಬಾ ಥ್ಯಾಂಕ್ಸ್

ಸುಧಾಮಣಿ – 99029 01231

# ಮನೋರಂಜನೆಗಾಗಿ ಗಣಿತ – 3 ನೆಯ ಕಂತು

(1) ಒಂದು ಲಾಕರಿನ ಪಾಸ್ ವರ್ಡ್ ನಾಲ್ಕು ಸಂಖ್ಯೆಗಳನ್ನು ಹೊಂದಿದೆ. ಅವುಗಳ ಮೊತ್ತ 24. ಕೊನೆಯ ಸಂಖ್ಯೆ ಬೇರೆಲ್ಲಾ ಸಂಖ್ಯೆಗಳಿಗಿಂತ ಹೆಚ್ಚಿನದು ಮತ್ತು ತನ್ನ ಹಿಂದಿನ ಸಂಖ್ಯೆಯ ಎರಡರಷ್ಟಿದೆ. ಒಂದನೆಯ ಸಂಖ್ಯೆಗೆ ಎರಡನ್ನು ಸೇರಿಸಿದರೆ ಎರಡನೆಯ ಸಂಖ್ಯೆ ದೊರೆಯುತ್ತದೆ. ಹಾಗಾದರೆ ಆ ಪಾಸ್ ವರ್ಡ್ ಯಾವುದು ?

(2) ಒಂದು ಕೊಠಡಿಯು 15 ಅಡಿ ಉದ್ದ, 12 ಅಡಿ ಅಗಲ ಮತ್ತು 12 ಅಡಿ ಎತ್ತರವಿದೆ. ಅದರಲ್ಲಿ 2 ಅಡಿ ಉದ್ದ , 1 ಅಡಿ ಅಗಲ ಮತ್ತು 1/2 ಅಡಿ ಎತ್ತರವಿರುವ ಡಬ್ಬಗಳನ್ನು ಜೋಡಿಸಬೇಕಾಗಿದೆ. ಕೋಣೆಯಲ್ಲಿ ಓಡಾಡಲು ಸುತ್ತಲೂ ಒಂದು ಅಡಿ ಜಾಗವನ್ನು ಬಿಡಬೇಕು ಮತ್ತು ಕೋಣೆಯ ಎತ್ತರದ ಮುಕ್ಕಾಲು ಭಾಗದಷ್ಟು ಎತ್ತರ ಮಾತ್ರ ಡಬ್ಬಗಳನ್ನು ಜೋಡಿಸಬಹುದು. ಹಾಗಿದ್ದರೆ, ಆ ಕೋಣೆಯಲ್ಲಿ ಎಷ್ಟು ಡಬ್ಬಗಳನ್ನು ಜೋಡಿಸಬಹುದು ?

(3) 1 ರಿಂದ 11 ರವರೆಗಿನ ಸಂಖ್ಯೆಗಳನ್ನು ಉಪಯೋಗಿಸಿಕೊಂಡು ಮತ್ತು ಅವುಗಳನ್ನು ಕೂಡಿ, ಕಳೆದು, ಗುಣಿಸಿ, ಭಾಗಿಸಿ ಉತ್ತರವಾಗಿ 2,001ನ್ನು ಹೇಗೆ ಪಡೆಯುವಿರಿ ?

(4) ಒಂದು ಕಾರ್ಖಾನೆಯು ಪ್ರಾರಂಭವಾಗಿ ಒಂದು ವರ್ಷದ ನಂತರ ಮಾಲೀಕರು ಉದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಲು ನಿರ್ಧರಿಸುತ್ತಾರೆ. ಅವರು ಈಗ ಇರುವ ಪುರುಷ ಉದ್ಯೋಗಿಗಳ ಸಂಖ್ಯೆಯನ್ನು ಅವರಿರುವ ಸಂಖ್ಯೆಯ ಕಾಲು ಭಾಗದಷ್ಟು ಮತ್ತು ಮಹಿಳಾ ಉದ್ಯೋಗಿಗಳ ಸಂಖ್ಯೆಯನ್ನು ಅವರಿರುವ ಸಂಖ್ಯೆಯ ಅರ್ಧದಷ್ಟು ಹೆಚ್ಚಿಸಿದರು. ಈಗ ಮಹಿಳಾ ಉದ್ಯೋಗಿಗಳ ಸಂಖ್ಯೆ ಪುರುಷ ಉದ್ಯೋಗಿಗಳ ಸಂಖ್ಯೆಯ ಮುಕ್ಕಾಲು ಭಾಗದಷ್ಟು ಆಯಿತು. ಒಟ್ಟು ಉದ್ಯೋಗಿಗಳ ಸಂಖ್ಯೆ 70 ಆದರೆ ಕಾರ್ಖಾನೆಯ ಪ್ರಾರಂಭದ ಸಮಯದಲ್ಲಿ ಇದ್ದ ಪುರುಷ ಮತ್ತು ಮಹಿಳಾ ಉದ್ಯೋಗಿಗಳ ಸಂಖ್ಯೆಯನ್ನು ಕಂಡು ಹಿಡಿಯಿರಿ.

(5) ಒಬ್ಬ ಹಣ್ಣಿನ ವ್ಯಾಪಾರಿಯು ಒಂದು ಹಣ್ಣಿನ ತೋಟದಿಂದ 3,000 ಕಲ್ಲಂಗಡಿ ಹಣ್ಣುಗಳನ್ನು 3 ಲಕ್ಷ ರೂಪಾಯಿ ಕೊಟ್ಟು ಕೊಂಡನು. ಅನಂತರ ಅವುಗಳನ್ನು ಸಾಗಾಟಕ್ಕೆ ಮತ್ತು ಇತರ ವೆಚ್ಚಗಳಿಗಾಗಿ 20 ಸಾವಿರ ರೂಪಾಯಿ ಖರ್ಚಾಯಿತು.

ವ್ಯಾಪಾರಿಯು ಆ ಹಣ್ಣುಗಳಲ್ಲಿ ಕಾಲು ಭಾಗದಷ್ಟು ಹಣ್ಣುಗಳನ್ನು ಚಿಕ್ಕ ಗಾತ್ರದ್ದೆಂದು, ಅರ್ಧ ಭಾಗದಷ್ಟು ಹಣ್ಣುಗಳನ್ನು ಮಧ್ಯಮ ಗಾತ್ರದ್ದೆಂದು ಮತ್ತು ಉಳಿದ ಕಾಲು ಭಾಗದಷ್ಟು ಹಣ್ಣುಗಳನ್ನು ದೊಡ್ಡ ಗಾತ್ರದ್ದೆಂದು ವಿಂಗಡಿಸಿ ಗಾತ್ರದ ಪ್ರಕಾರ ಅವುಗಳನ್ನು ಬೇರೆ ಬೇರೆ ಬೆಲೆಗೆ ಮಾರಿದನು. ಚಿಕ್ಕ ಹಣ್ಣನ್ನು ಮಾರಿದ ಒಂದೂವರೆಯಷ್ಟು ಬೆಲೆಗೆ ಮಧ್ಯಮ ಗಾತ್ರದ ಹಣ್ಣುಗಳನ್ನು ಮತ್ತು ಎರಡರಷ್ಟು ಬೆಲೆಗೆ ದೊಡ್ಡ ಗಾತ್ರದ ಹಣ್ಣುಗಳನ್ನು ಮಾರಿದನು.

ಈ ಮಾರಾಟದಿಂದ ಅವನಿಗೆ ಒಟ್ಟು 40,000 ರೂಪಾಯಿ ಲಾಭವಾದರೆ ಅವನು ಯಾವ ಯಾವ ಗಾತ್ರದ ಹಣ್ಣುಗಳನ್ನು ಎಷ್ಟೆಷ್ಟು ಬೆಲೆಗೆ ಮಾರಿದನು ?

ಸರಿ ಉತ್ತರಗಳು : –

(1) 5748

(2) (13*10*9) = 1170 ಡಬ್ಬಗಳು

(3) (8*10*11) + (2*3*4*5*9) + (6*7) – 1 = 2,001

(4) ಕಾರ್ಖಾನೆಯ ಪ್ರಾರಂಭದಲ್ಲಿದ್ದ ಪುರುಷ ಮತ್ತು ಮಹಿಳಾ ಉದ್ಯೋಗಿಗಳ ಸಂಖ್ಯೆ ಕ್ರಮವಾಗಿ 32 ಮತ್ತು 20.

(5) ಚಿಕ್ಕ ಗಾತ್ರದ ಹಣ್ಣು 80 ರೂಪಾಯಿ, ಮಧ್ಯಮ ಗಾತ್ರದ ಹಣ್ಣು 120 ರೂಪಾಯಿ ಮತ್ತು ದೊಡ್ಡ ಗಾತ್ರದ ಹಣ್ಣು 160 ರೂಪಾಯಿಗಳು.

**ನಿಮ್ಮ ಉತ್ತರಗಳಲ್ಲಿ**
**5 ಸರಿ ಇದ್ದರೆ ... ಅತ್ಯುತ್ತಮ**
**3–4 ಸರಿ ಇದ್ದರೆ ....... ಉತ್ತಮ**
**1–2 ಸರಿ ಇದ್ದರೆ ...... ಮಧ್ಯಮ**
**ಒಂದೂ ಸರಿ ಇಲ್ಲದಿದ್ದರೆ ... ಹೆಚ್ಚಿನ ಅಭ್ಯಾಸದ ಅಗತ್ಯವಿದೆ.**



**ಬಿ.ಈ.ಗೋವಿಂದ್**
**91677 62948**

# ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ



**ರವಿಶಂಕರ್ ಎಸ್.** (62) 22.08.2023
ಸದಸ್ಯರು



**ಶಶಿಧರ ಕೃಷ್ಣ ಕೆ.ಆರ್** (78) 07.09.2023
ಸಂಘದ ಸದಸ್ಯರಾಗಿದ್ದ ದಿ॥ ಕೆ.ಆರ್. ಲಕ್ಷ್ಮಿನಾರಾಯಣ್ ಮತ್ತು
ದಿ॥ ಕೆ.ಆರ್. ಗಿಣಿರವರ ಸಹೋದರರು



**ಗಣೇಶ್ ಗವಾಯಿ** (71) 06.10.2023
ನಿಕಟಪೂರ್ವ ಕಾರ್ಯಕಾರಿ ಸಮಿತಿ
ಸದಸ್ಯ ಶ್ರೀ ಬಿ.ಸಿ.ನಟರಾಜರವರ
ಭಾವಮೈದುನರು



**ಮಂಜುನಾಥ್** (59) 20.10.2023
ದಿವಂಗತ ಎಸ್. ಶಿವರಾಮ್‌ರವರ
ಸೋದರರ ಪುತ್ರರು



**ಟಿ.ಎಲ್.ರಾಮಚಂದ್ರನ್** (89) 01.12.2023
ಸಂಘದ ಸದಸ್ಯರಾಗಿರುವ
ಶ್ರೀಯುತ ಆರ್. ದಿವಾಕರ್ ಮತ್ತು
ಆರ್. ಶ್ರೀಧರ್ ಅವರ ತಂದೆಯವರು



**ಜಿ.ಎನ್. ನಾಗಪ್ರಕಾಶ್** (63) 04.12.2023
ಸಂಘದ ಮಹಾಪೋಷಕಿ
ಶ್ರೀಮತಿ ಕೆ. ಅಂಜನಿ ಅವರ ಮೈದುನರು



**ಕಲಾ ರಾಮನಾಥನ್** (90) 08.12.2023
ಸದಸ್ಯೆ ಶ್ರೀಮತಿ ಶೈಲಾ ಭಾನುಪ್ರಕಾಶ್
ಅವರ ತಾಯಿಯವರು



**ಎನ್. ಚಂದ್ರಶೇಖರಯ್ಯ** (85) 29.12.2023
ಸದಸ್ಯರು ಶ್ರೀ ಬಿ.ಇ. ಗೋವಿಂದ್
ಅವರ ಭಾವನವರು



**ಶಾರದಮ್ಮ** (78) 1.12.2023
ಸದಸ್ಯರು ಶ್ರೀ ಬಿ. ಶೇಷಾದ್ರಿ
ಅವರ ತಾಯಿಯವರು



**ಎಸ್.ಕೆ. ರವೀಂದ್ರನಾಥ್** (70) 06.01.2024
ಸಂಘದ ಉಪಾಧ್ಯಕ್ಷ ಶ್ರೀ ಸತ್ಯನಾರಾಯಣ
ಅವರ ಸೋದರ ಸಂಬಂಧಿ



**ಶಾರದಾಂಬ** (88) 16–01–2024
ಸಂಘದ ಪೋಷಕರಾಗಿರುವ
ಶ್ರೀಯುತ ಗೋವಿಂದಪ್ರಸಾದ್ ಮತ್ತು
ಬಿ.ಎನ್.ಜಿ. ಕುಮಾರ್ ಅವರ ತಾಯಿಯವರು

****************************************************************************************************

# ಸಾಂತ್ವನ ನಿಧಿಗೆ ದೇಣಿಗೆ ನೀಡಿರುವ ಸದಸ್ಯರು ಮತ್ತು ಹಿತೈಷಿಗಳು (ರೂ.ಗಳಲ್ಲಿ)

| | | | | | |
|---|---|---|---|---|---|
|  | ಶ್ರೀ ಶ್ಯಾಮಸುಂದರ್ ಆರ್.ಎ. | 10000/– |  | ಶ್ರೀ ವೆಂಕಟೇಶ್ ಎಸ್. | 5000/– |
|   | ಶ್ರೀ ಮಂಜುನಾರಾಯಣ್ ಕೆ.<br>ಶ್ರೀ ಶಿವರಾಮ್ ಕೆ. | 10000/– | | ಶ್ರೀಮತಿ ಕಮಲಮ್ಮ ಚಂದ್ರಶೇಖರಯ್ಯ | 5000/– |
| | | | | ಶ್ರೀ ರಾಜಾರಾಮ್ ಎಸ್.ಎಲ್. | 3000/– |
| | ಶ್ರೀಮತಿ ಹೇಮಾವತಿ ಎಸ್.<br>ಮತ್ತು ಪುತ್ರರು | 9000/– | | ಶ್ರೀಮತಿ ಇಂದಿರಾ ಜಿ. | 1000/– |

## ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/-) ನೀಡಿದ ಸದಸ್ಯರು

ಶ್ರೀ ನಾಗಭೂಷಣ
ಶ್ರೀ ಅಟ್ಟೂರು ರಾಮಕೃಷ್ಣ ಶರ್ಮ
ಶ್ರೀ ಅರುಣ್ ಕುಮಾರ್ ಆರ್.ಪಿ.
ಶ್ರೀಮತಿ ಸರಸ್ವತಿ ಬಿ.ಪಿ.
ಶ್ರೀ ಸತ್ಯಪ್ರಸಾದ್ ಎಸ್.ಆರ್.
ಶ್ರೀಮತಿ ದಿವ್ಯಾ ವಿ. ರವಿಶಂಕರ್
ಶ್ರೀ ಶೇಷಾದ್ರಿ ಬಿ.
ಶ್ರೀಮತಿ ಪಾರ್ವತಿ ದೇವಿ
ಶ್ರೀಮತಿ ವಿಶಾಲಾಕ್ಷಿ ಆರ್.
ಶ್ರೀ ಮಂಜುನಾರಾಯಣ ಕೆ.
ಶ್ರೀಮತಿ ವನಿತಾ ಮಂಜುನಾರಾಯಣ
ಶ್ರೀ ಶ್ರೀನಿವಾಸ ಎಚ್.ಪಿ.
ಪರಮೇಶ್ವರ್ ಎಚ್.ಎಸ್.
ಶ್ರೀ ಚಂಪಕಧಾಮ ಎಸ್. (1500/-)
ಶ್ರೀಮತಿ ಗಿರಿಜಾ ದೇವಿ ಎಂ.

## ಅನ್ನ ಸಂತರ್ಪಣೆ ನಿಧಿಗೆ ದೇಣಿಗೆ ನೀಡಿರುವ ಸದಸ್ಯರು (ರೂ.ಗಳಲ್ಲಿ)

| | |
|---|---|
| ಶ್ರೀಯುತರಾದ ಮಂಜುನಾರಾಯಣ ಕೆ. ಮತ್ತು ಶಿವರಾಮ್ ಕೆ. | 25000/- |
| ಶ್ರೀ ಸೂರ್ಯನಾರಾಯಣ ಬಿ.ಎಸ್. | 5000/- |
| ಶ್ರೀ ಸುಬ್ರಮಣ್ಯಂ ಬಿ. | 5000/- |
| ಬಿ.ಇ. ಗೋವಿಂದ್ | 3000/- |
| ಶ್ರೀ ಅಶ್ವತ್ಥರಾಜಾರಾವ್ | 2000/- |

## ವಿದ್ಯಾ ನಿಧಿಗೆ ದೇಣಿಗೆ ನೀಡಿರುವ ಸದಸ್ಯರು (ರೂ.ಗಳಲ್ಲಿ)

| | |
|---|---|
| ಶ್ರೀಮತಿ ಬಿಂದು ವೆಂಕಟೇಶ್ | 25000/- |
| ಶ್ರೀ ಸೂರ್ಯನಾರಾಯಣ ಬಿ.ಎಸ್. | 5000/- |
| ಶ್ರೀ ಸುಬ್ರಹ್ಮಣ್ಯಂ ಬಿ. | 3000/- |
| ಶ್ರೀಮತಿ ಸರಸ್ವತಿ ಬಿ.ಪಿ. | 2500/- |

## ಹುಂಡಿಯ ಸಂಗ್ರಹಣೆಯಿಂದ ದೇಣಿಗೆ ನೀಡಿರುವವರು

ಸರೋಜ ಬಿ.ಎಂ. (ತಾರಾ ರವೀಂದ್ರ) 2400/-

## ಕಳೆದ ವರ್ಷದ ಆಗಸ್ಟ್ ತಿಂಗಳಿನಿಂದ ಈಚೆಗೆ ಬೃಹಚ್ಚರಣ ಸಂಘಕ್ಕೆ ಸೇರ್ಪಡೆಯಾಗಿರುವ ಸದಸ್ಯರು

ಸದಸ್ಯರು

1. ಶ್ರೀ ಸುಹಾಸ್ ಆರ್.ಎಂ.
2. ಶ್ರೀಮತಿ ರಂಜಿನಿ ಸಿದ್ಧಾಂತಿ
3. ಶ್ರೀ ಅನಿಲ್ ಕುಮಾರ್ ಎಸ್.ಟಿ.
4. ಶ್ರೀಮತಿ ಗಾಯತ್ರಿ ಶೇಷಾಚಲ
5. ಶ್ರೀ ಹರಿಹರ ಜಿ.ಎ.
6. ಶ್ರೀಮತಿ ಕೃಪಾ ಹರೀಶ್
7. ಶ್ರೀಮತಿ ರಾಧಾ ವೆಂಕಟೇಶ್

ಸದಸ್ಯರು

8. ಶ್ರೀ ಕಾನಿಷ್ಕ ಕೃಷ್ಣ
9. ಶ್ರೀ ರಾಜಾರಾಮ್ ಎಸ್.ಎಲ್.
10. ಶ್ರೀ ಪ್ರಾಂಜಲ್ ಆರ್. ಶರ್ಮ

ಪೋಷಕರು

11. ಶ್ರೀ ದೀಪಕ್ ವೆಂಕಟೇಶನ್

**ನೂತನ ಸದಸ್ಯರನ್ನು ಬೃಹಚ್ಚರಣ ಸಂಘಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತೇವೆ.**

**************************************************************************************

### ಪ್ರತಿಭಾ ಪುರಸ್ಕಾರ



ಸಂಘವು ನಡೆಸಿದ 2023 ನೇ ಸಾಲಿನ ಪ್ರತಿಭಾ ಪುರಸ್ಕಾರದ ಅಂಗವಾಗಿ ಸಂಘದ ಸಹಕಾರ್ಯದರ್ಶಿ ಶ್ರೀ ಶಶಿಧರ್ ಅವರು ಸಂಘದ ಪೋಷಕರಾಗಿದ್ದ ದಿ॥ ಚಂದ್ರಶೇಖರಯ್ಯನವರ ಮೊಮ್ಮಕ್ಕಳಾದ ಚಿ॥ ಸಹನಾ ಪ್ರಸಾದ್ ಮತ್ತು ಚಿ॥ ಸಮರ್ಥ ಪ್ರಸಾದ್ ಅವರಿಗೆ ಸಂಘದ ಪರವಾಗಿ 06-09-2023 ರಂದು ಅಭಿನಂದನಾಪತ್ರ, 2000/- ರೂ.ಗಳ ಗಿಫ್ಟ್ ಕೂಪನ್ ಮತ್ತು ಬ್ಯಾಕ್ ಪ್ಯಾಕ್ ಗಳನ್ನು ನೀಡಿ ಅಭಿನಂದಿಸಿದರು.

## ಗೃಹಪ್ರವೇಶ

ಸಂಘದ ಸದಸ್ಯರು ಶ್ರೀ ಎಸ್.ಟಿ. ಅನಿಲ್ ಕುಮಾರ್ ಮತ್ತು ಶ್ರೀಮತಿ ಉಷಾ ಅವರ ನೂತನ "ಇಂತ್ಯ" ದ ಗೃಹಪ್ರವೇಶವು ದಿನಾಂಕ 16–10–2023 ರಂದು ಬೆಂಗಳೂರಿನಲ್ಲಿ ನಡೆಯಿತು.

************************************************************************************

## ಜನನ

ಸಂಘದ ಸದಸ್ಯರಾದ ಶ್ರೀ ಆರ್. ರವಿಶಂಕರ್ ಹಾಗೂ ಶ್ರೀಮತಿ ಮಾಲತಿ ರವಿಶಂಕರ್ ಅವರ ಪುತ್ರಿ ಶ್ರೀಮತಿ ಪದ್ಮಶ್ರೀ ಸುಬ್ರಮಣ್ಯ ಅವರು 3ನೇ ಜನವರಿ 2024ರಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ. ಸಂಘವು ನವಜಾತ ಶಿಶುವಿಗೆ ಆಯುರಾರೋಗ್ಯ ಮತ್ತು ಉತ್ತಮ ವಿದ್ಯಾಯೋಗವನ್ನು ಹಾರೈಸುತ್ತದೆ.

************************************************************************************

## ಶುಭ ಹಾರೈಕೆಗಳು



ಸಂಘದ ಸದಸ್ಯರು ಶ್ರೀ ಎಸ್. ಚಂದ್ರಶೇಖರ್ ಅವರು 18–12–2023 ರಂದು ಅರವತ್ತನೆಯ ವರ್ಷಕ್ಕೆ ಕಾಲಿರಿಸಿದ ಶುಭಸಂದರ್ಭದಲ್ಲಿ ಸಂಘವು ಶ್ರೀ ಚಂದ್ರಶೇಖರ್ ದಂಪತಿಗಳಿಗೆ ಉತ್ತಮ ಆರೋಗ್ಯ ಮತ್ತು ದೀರ್ಘಕಾಲದ ಕ್ರಿಯಾಶೀಲ ಜೀವನವನ್ನು ಹಾರೈಸುತ್ತದೆ.

************************************************************************************

## ಅಭಿನಂದನೆಗಳು



ಸಂಘದ ಹಿರಿಯ ಸದಸ್ಯರಾದ ಶ್ರೀ ವಿ. ಛಾಯಾಪತಿಯವರು ಇಂಡಿಯನ್ ಸೊಸೈಟಿ ಆಫ್ ಟೆಕ್ನಿಕಲ್ ಎಜುಕೇಶನ್ ಸಂಸ್ಥೆಯಿಂದ ಶಿಕ್ಷಕರ ದಿನಾಚರಣೆಯ ಅಂಗವಾಗಿ 05–09–2023 ರಂದು ಜರುಗಿದ ಸಮಾರಂಭದಲ್ಲಿ ರಾಷ್ಟ್ರಮಟ್ಟದ "ಅತ್ಯುತ್ತಮ ಶಿಕ್ಷಕ" ಎಂಬ ಪ್ರಶಸ್ತಿಗೆ ಭಾಜನರಾಗಿದ್ದಾರೆ.

*********************************************************



ಸಂಘದ ಹಿರಿಯ ಸದಸ್ಯರು ಶ್ರೀ ಕೆ.ಸಿ. ನಟರಾಜನ್ ಅವರನ್ನು ತಾರೀಖು 01–09–2023 ರಂದು ಚಿತ್ರಕಲಾ ಪರಿಷತ್ತಿನಲ್ಲಿ "ಫೋಟೋ ಜರ್ನಲಿಸ್ಟ್ ಅಸೋಸಿಯೇಶನ್" ನ ರಜತ ಮಹೋತ್ಸವದ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

*********************************************************



ಸಂಘದ ಪೋಷಕ ಶ್ರೀ ಎಸ್. ನಾಗರಾಜನ್ ಅವರ ಪತ್ನಿ ಭರತನಾಟ್ಯ ಕಲಾವಿದೆ ಹಾಗೂ ಯೋಗಾಭ್ಯಾಸ ಶಿಕ್ಷಕಿ ಪಿ.ಕೆ. ನಾಗಲಕ್ಷ್ಮಿ ಅವರಿಗೆ ನೃತ್ಯದ "ಲಾಸ್ಯಾಂಗಗಳಲ್ಲಿ ರಸೋತ್ಪತ್ತಿ" ಎಂಬ ವಿಷಯದ ಬಗ್ಗೆ ಪ್ರೌಢ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ದೊರಕಿದೆ.

*********************************************************



ಸಂಘದ ಹಿರಿಯ ಸದಸ್ಯರಾದ ಪ್ರೊ. ಕೆ.ಎಸ್. ಮಧುಸೂದನ ಅವರು ದಿನಾಂಕ 10–01–2024 ರಂದು ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾಲಯವು ಆಯೋಜಿಸಿದ್ದ "ಕುವೆಂಪು ದಿನಾಚರಣೆ"ಯ ಸಂದರ್ಭದಲ್ಲಿ ರಾಷ್ಟ್ರಕವಿ ವಿರಚಿತ "ಶಂಕರಾಚಾರ್ಯ" ಕವಿತೆಯ ಬಗೆಗೆ ಹಾಗೂ ಅವರ ಅದ್ವೈತ ಚಿಂತನೆಯ ಬಗೆಗೆ ವಿಶ್ಲೇಷಾತ್ಮಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

**ಸಂಘವು ಈ ಎಲ್ಲ ಮಹನೀಯ ಮಹಿಳೆಯರನ್ನು ಅಭಿನಂದಿಸುತ್ತಾ ಇವರುಗಳ ಕ್ರಿಯಾಶಿಲತೆಯು ನಿರಂತರವಾಗಿರಲೆಂದು ಹಾರೈಸುತ್ತದೆ.**

# ಮೈಸೂರಿನಲ್ಲಿ ಸಂಘದ ಸದಸ್ಯರಿಗೆ ಕ್ಯಾಲೆಂಡರ್ ವಿತರಣೆ



ಮೈಸೂರಿನಲ್ಲಿರುವ ಸಂಘದ ಸದಸ್ಯರಿಗೆ 2024ರ ಕ್ಯಾಲೆಂಡರ್‌ಗಳ ವಿತರಣೆಯನ್ನು ವ್ಯವಸ್ಥೆಗೊಳಿಸಿದಾಗ ತೆಗೆದ ಚಿತ್ರ. ಮೈಸೂರಿನ ನಿವಾಸಿಯಾಗಿರುವ ಸಂಘದ ಸದಸ್ಯರಾದ ಶ್ರೀ ರವೀಂದ್ರ ರಾಮ್‌ರವರು ಆ ಸ್ಥಳದಲ್ಲಿರುವ ಸದಸ್ಯರಿಗೆ ಕ್ಯಾಲೆಂಡರ್‌ಗಳು ತಲುಪಲು ನೆರವಾಗಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರು ಕಾರ್ಯದರ್ಶಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಸಂಘವು ಶ್ರೀ ರವೀಂದ್ರ ರಾಮ್‌ರವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತದೆ.

***************************************************************************************************

## ಸಂಘದ ನೋಂದಣಿಯ ನವೀಕರಣ ಪತ್ರ



[illegible]

## ಅಭಿನಂದನೆಗಳು



ಸಂಘದ ಸದಸ್ಯರಾಗಿರುವ ಡಾ|| ಪ್ರಾಂಜಲ್ ಶರ್ಮ ಅವರು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮನೋಚಿಕಿತ್ಸಕ ವಿಭಾಗದಲ್ಲಿ 2020 – 23 ನೆಯ ಸಾಲಿನ "ಅತ್ಯುತ್ತಮ ಸ್ನಾತಕೋತ್ತರ ವಿದ್ಯಾರ್ಥಿ" ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸಂಘವು ಡಾ|| ಪ್ರಾಂಜಲ್ ಶರ್ಮ ಅವರನ್ನು ಅಭಿನಂದಿಸುತ್ತಾ ಶ್ರೀಯುತರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವನ್ನು ಹಾರೈಸುತ್ತದೆ.

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ ನೋಂದಣಿಯು 2023–24 ನೇ ಸಾಲಿಗೆ ನವೀಕರಿಸಲ್ಪಟ್ಟಿದೆ. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಅರುಣ್‌ರವರು ಆಸ್ಥೆ ವಹಿಸಿ ಈ ಕಾರ್ಯವು ಸುಸೂತ್ರವಾಗಿ ವಿಳಂಬವಿಲ್ಲದೆ ನೆರವೇರಲು ಸಹಕರಿಸಿದ್ದಾರೆ.

ಸಂಘವು ಶ್ರೀಯುತರಿಗೆ ಧನ್ಯವಾದಗಳನ್ನು ಸಲ್ಲಿಸುತ್ತದೆ.

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.
E-mail : magazines@mmdbs.in
Website : mmdbs.in

To,

Book-Post

**Published by Sri S. Somasundara, President, 'BRUHACHARANA SANGHA', No. 8, 3rd Cross, Annayyappa Block, Kumara Park West, Bengaluru - 560 020.**
**Printed at Hamsanikethan Prints, No. 126, C.T. Bed, 6th Cross Rd, Banashankari Stage II, Banashankari, Bengaluru - 560070**